# ಜಲ ಸಂಪದ

## ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ

### ಗೊಂದಿ ಆಧುನೀಕರಣ ಯೋಜನೆ ವಾರ್ತಾಪತ್ರ

ಜುಲೈ-ಆಗಸ್ಟ್-ಸೆಪ್ಟೆಂಬರ್ 2018 | ಸಂಚಿಕೆ-7 | ಖಾಸಗಿ ಪ್ರಸಾರಕ್ಕಾಗಿ





**ಈ ಸಂಚಿಕೆಯಲ್ಲಿ...**


- ಸಂಘದ ಕಟ್ಟಡಕ್ಕೆ ಭೂದಾನ
- ನಿಷ್ಕ್ರಿಯತೆಯಿಂದ ಸಫಲತೆಯತ್ತ
- ಗೊಂದಿ ಆಧುನೀಕರಣದ ಪರಿಣಾಮ
- ಯಶಸ್ವಿ ಸಾಧನೆಯತ್ತ ಕೊಪ್ಪದೊಡ್ಡಕೆರೆ
- ಬದಲಾವಣೆಯ ಪಥ; ನಾಗತಿ ಬೆಳಗಲು...ಇತ್ಯಾದಿ



## ಸಂಘದ ಕಟ್ಟಡಕ್ಕೆ ಭೂ ದಾನ

ಬಾಬಳ್ಳಿ ನೀರು ಬಳಕೆದಾರರ ಸಹಕಾರ ಸಂಘದ ಸ್ವಂತ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಜಾಗವಿಲ್ಲದೆ ಪರದಾಡುತ್ತಿರುವ ಸಂದರ್ಭದಲ್ಲಿ ಬಾಬಳ್ಳಿ ಗ್ರಾಮವಾಸಿಯಾದ ಕೆ. ಸಿ. ವೀರಭದ್ರಪ್ಪ ತಮ್ಮ ಸ್ವಂತ ಜಮೀನನ್ನು ದಾನ ಮಾಡಿ ಹಿರಿತನ ಮೆರೆದಿದ್ದಾರೆ. ಕಾಗೇಕೊಡಮಗ್ಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಾಬಳ್ಳಿ ಗ್ರಾಮದಲ್ಲಿ ಇವರ ಸ್ವಾಧೀನದಲ್ಲಿರುವ ಪಿತ್ರಾರ್ಜಿತ ಜಾಗವನ್ನು ತಮ್ಮ ಸ್ವ-ಇಚ್ಛೆಯಿಂದ, ಸ್ವಾರ್ಥವಿಲ್ಲದೆ, ಕೃಷಿ ಮತ್ತು ರೈತರ ಹಿತದೃಷ್ಟಿಯಿಂದ ಮತ್ತು ನೀರು ಬಳಕೆದಾರರ ಸಹಕಾರ ಸಂಘದ ರೈತರ ಅನುಕೂಲಕ್ಕಾಗಿ ದಾನ ಮಾಡಲು ಮುಂದೆ ಬಂದಿರುವುದು ಸಂತೋಷದಾಯಕ ವಿಷಯ.

ಬಾಬಳ್ಳಿ ನೀರು ಬಳಕೆದಾರರ ಸಹಕಾರ ಸಂಘವು 27.11.2000ರಂದು ರಚನೆಯಾಗಿದೆ. 17 ವರ್ಷಗಳು ಕಳೆದರೂ ಸಹ ಬೇರೊಂದು ಕಟ್ಟಡದಲ್ಲಿ ಸಂಘದ ಎಲ್ಲಾ ದಾಖಲೆಗಳನ್ನು ಇಟ್ಟುಕೊಂಡು ಕಾರ್ಯನಿರ್ವಹಿಸುತ್ತಾ ಬಂದಿದೆ. ಗೊಂದಿ ಆಧುನೀಕರಣ ಯೋಜನೆಯು ಆರಂಭಗೊಂಡ ನಂತರ ಸಂಘಗಳಿಗೆ ಸ್ವಂತ ಕಟ್ಟಡವನ್ನು ನಿರ್ಮಾಣ ಮಾಡಿಕೊಳ್ಳಲು ಅನುದಾನವನ್ನು ಕಲ್ಪಿಸಿಕೊಡಲಾಯಿತು. ಯೋಜನೆಯಿಂದ ಹಣದ ಸಹಾಯ ದೊರೆತರೂ ಸಹ ಕಟ್ಟಡ ನಿರ್ಮಾಣಕ್ಕೆ ಜಾಗವಿಲ್ಲದೆ ಪರದಾಡುವ ಪರಿಸ್ಥಿತಿ. ಇಂತಹ ಸಂಧರ್ಭದಲ್ಲಿ ಕೆ.ಸಿ.ವೀರಭದ್ರಪ್ಪ ಮತ್ತು ಸಹೋದರರು ತಮ್ಮ ಜಾಗವನ್ನು ಸಂಘದ ಕಟ್ಟಡ ನಿರ್ಮಾಣಕ್ಕೆ ದಾನ ಮಾಡಲು ಮುಂದೆ ಬಂದರು.

ಬಾಬಳ್ಳಿ ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರಾದ ಗೋಪಾಲ್ ಗಿರಿಯವರ ಸಮ್ಮುಖದಲ್ಲಿ ಗ್ರಾಮ ಪಂಚಾಯಿತಿಯ ದಾಖಲೆಗಳ ಪ್ರಕಾರ 189, ನಮೂನೆ 11ಬಿ ಪ್ರಮಾಣ ಸಂಖ್ಯೆ 4611486ರ 66.89 ಚದರ ಮೀಟರ್ ಅಳತೆಯ ಜಾಗವನ್ನು ವೀರಭದ್ರಪ್ಪ ಮತ್ತು ಸಹೋದರರು ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬಾಬಳ್ಳಿ ನೀರು ಬಳಕೆದಾರರ ಸಹಕಾರ ಸಂಘಕ್ಕೆ ದಿನಾಂಕ 12.07.2018ರಂದು ದಾನವಾಗಿ ನೀಡಿ ದಾಖಲೆಯಲ್ಲಿ ನಮೂದಿಸಿ ಸಹಿ ಮಾಡಿರುತ್ತಾರೆ.


ಕಷ್ಟದಲ್ಲಿರುವವರಿಗೆ ಒಂದು ರೂಪಾಯಿ ದಾನ ಮಾಡಲು ಯೋಚಿಸುವ ಇಂದಿನ ಸಮಾಜದಲ್ಲಿ ರೂ. 395000 ಬೆಲೆ ಬಾಳುವ 66.89 ಚದರ ಮೀಟರ್ ಅಳತೆಯ ಜಾಗವನ್ನು ದಾನವಾಗಿ ನೀಡಿರುವುದು ಸಮಾಜಕ್ಕೆ ಉತ್ತಮ ಮಾದರಿಯಾಗಿದೆ.

ಆರ್. ನಿರ್ಮಲ, ಸ್ಮೆಕ್ ಯೋಜನಾ ಸಹಾಯ ಸಂಸ್ಥೆ, ಭದ್ರಾವತಿ ಕಛೇರಿ

## ಮಹಿಳಾ ಸದಸ್ಯರಿಗೆ ಕೌಶಲ್ಯ ತರಬೇತಿ

ದಿನಾಂಕ 3-7-2018ರಂದು ಮೂಡಲ ವಿಠಲಾಪುರ ನೀರು ಬಳಕೆದಾರರ ಸಹಕಾರ ಸಂಘದ ವ್ಯಾಪ್ತಿಗೆ ಬರುವ ಕೆರೆಬೀರನಹಳ್ಳಿ ಗ್ರಾಮದಲ್ಲಿ ಕೌಶಲ್ಯ ತರಬೇತಿಯನ್ನು ಆಯೋಜಿಸಲಾಗಿತ್ತು. ಸಂಘದ ವ್ಯಾಪ್ತಿಗೆ ಬರುವ ವಿವಿಧ ಗ್ರಾಮಗಳ ಮಹಿಳೆಯರು, ಉಪಸಮಿತಿ ಸದಸ್ಯರು ಹಾಗೂ ನಿರ್ದೇಶಕರು ಭಾಗವಹಿಸಿದ್ದರು. ಈ ಸಮಯದಲ್ಲಿ ಲಿಂಗತ್ವ ಸಂವೇದನೆ, ಕೃಷಿಯಲ್ಲಿ ನೀರಿನ ನಿರ್ವಹಣೆ ಕುರಿತು ಸಂವಾದ ನಡೆಯಿತು.





# ಬೆಳಕಿನ ಹಾದಿ

ಉತ್ತಮ ಮಳೆಗಾಲ ಬಂದ ಪರಿಣಾಮ ನಾಲ್ಕು ವರ್ಷಗಳ ನಂತರ ಭದ್ರಾ ಅಣೆಕಟ್ಟು ಸಂಪೂರ್ಣ ತುಂಬಿದೆ. ಈ ವರ್ಷ ಹಲವು ದಿನಗಳ ಕಾಲ ಕ್ರಸ್ಟ್ ಗೇಟುಗಳನ್ನು ತೆಗೆದು ನದಿಗೆ ನೀರು ಬಿಟ್ಟಿರುವುದನ್ನೂ ಸಹ ನಾವು ನೋಡಬಹುದು. 2014ರಲ್ಲಿ ಇದೇ ರೀತಿ ಡ್ಯಾಂ ಭರ್ತಿಯಾಗಿತ್ತು. ಕೃಷಿ ಹಾಗೂ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ ಎಂಬುದು ನೆಮ್ಮದಿಯ ವಿಷಯ.

ಅಣೆಕಟ್ಟು ಭರ್ತಿಯಾದ ಪರಿಣಾಮ ಗೊಂದಿ ನಾಲೆ ಅಚ್ಚುಕಟ್ಟು ಪ್ರದೇಶಕ್ಕೂ ಅನುಕೂಲವಾಗಲಿದೆ. ಎಲ್ಲಾ ಅಚ್ಚುಕಟ್ಟು ನೀರಾವರಿ ಜಮೀನಿಗೆ ಎರಡು ಬೆಳೆಯಲು ಸಾಕಷ್ಟು ಪ್ರಮಾಣದ ನೀರು ಲಭ್ಯವಾಗಲಿದೆ ಎಂದು ತಿಳಿಸಲು ಸಂತೋಷವಾಗುತ್ತದೆ. ಗೊಂದಿ ಆಧುನೀಕರಣ ಕಾಮಗಾರಿಗಳು ಬಹುತೇಕ ಮುಗಿಯುತ್ತಾ ಬಂದಿರುವುದರಿಂದ ನೀರಿನ ಹರಿವು ಸರಾಗವಾಗಿದೆ. ಮುಖ್ಯ ಕಾಲುವೆ ಮತ್ತು ಹೊಲ ಗಾಲುವೆಗಳಿಗೆ ಸಿಮೆಂಟ್ ಕಾಲುವೆಗಳ ಜಾಲವನ್ನು ನಿರ್ಮಿಸಿರುವುದರಿಂದ ನೀರು ವ್ಯರ್ಥವಾಗುತ್ತಿಲ್ಲ. ಕಾಲುವೆಗಳನ್ನು ಸೋಸಲು ರೈತರು ಶ್ರಮ ಪಡುವ ಅಗತ್ಯವಿಲ್ಲ, ಅದಕ್ಕಾಗಿ ಹಣ ವ್ಯಯಿಸುವುದು ತಪ್ಪಿದೆ, ಜಗಳ ಹಾಗೂ ಮನಸ್ತಾಪಗಳಿಗೆ ತೆರೆಬಿದ್ದಿದೆ. ಈ ವಿಷಯಗಳ ಬಗ್ಗೆ ಸದರಿ ಸಂಚಿಕೆಯಲ್ಲಿ ಹಲವು ರೈತರು ತಮ್ಮ ಮನದಾಳದ ಅನಿಸಿಕೆಯನ್ನು ಹಂಚಿಕೊಂಡಿದ್ದಾರೆ.

ಬಹಳ ಮುಖ್ಯವಾಗಿ ಆಧುನೀಕರಣದ ನಂತರ ನೀರಿನ ಬೇಡಿಕೆಯಲ್ಲಿ ಶೇಕಡ 30ರಷ್ಟು ಕಡಿಮೆಯಾಗಿದೆ ಎಂಬುದನ್ನು ನಮ್ಮ ಇಂಜಿನಿಯರುಗಳು ಗಮನಿಸಿದ್ದಾರೆ, ಇದಕ್ಕೆ ಪೂರಕವಾಗಿ ಅಂಕಿ-ಅಂಶಗಳನ್ನು ನೀಡಲಾಗಿದೆ. ಇದು ಗಮನಾರ್ಹ ಅಂಶ. ಯೋಜನೆಯ ಮೂಲ ಉದ್ದೇಶವೇ ಇದಾಗಿದ್ದು ಈ ನಿಟ್ಟಿನಲ್ಲಿ ಧನಾತ್ಮಕ ಪ್ರಗತಿ ಸಾಧ್ಯವಾಗಿರುವುದು ನಮ್ಮ ಶ್ರಮ ಸಾರ್ಥಕ ಎನಿಸಿದೆ. ಅಲ್ಲದೆ, ಅಕ್ಟೋಬರ್ ತಿಂಗಳಿನಿಂದ ಅಚ್ಚುಕಟ್ಟು ಕಾಲುವೆಗಳ ನಿರ್ವಹಣೆ ಜವಾಬ್ದಾರಿಯನ್ನು ನೀಬಸಸಂಗಳಿಗೆ ವರ್ಗಾಯಿಸುವ ಪ್ರಕ್ರಿಯೆ ಆರಂಭವಾಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.



ಶ್ರೀ ಜಿ.ಇ. ಯತೀಶ್ ಚಂದ್ರನ್
ಮುಖ್ಯ ಇಂಜಿನಿಯರ್,
ತುಂಗಾ ಮೇಲ್ದಂಡೆ ಯೋಜನೆ,
ಶಿವಮೊಗ್ಗ

ಉಕ್ಕಿ ಹರಿದ ಭದ್ರಾ, ತುಂಬಿ ತುಳುಕಿದ ಗೊಂದಿ





# ನಿಷ್ಕ್ರಿಯತೆಯಿಂದ ಸಫಲತೆಯತ್ತ

ಡಣಾಯಕಪುರದ ಶ್ರೀ ವೀರಭದ್ರೇಶ್ವರ ನೀರು ಬಳಕೆದಾರ ಸಹಕಾರ ಸಂಘವು 2010ರಿಂದ 2017ರವರೆಗೆ ವಾರ್ಷಿಕ ಮಹಾಸಭೆ ಮತ್ತು ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಮಾಡಿಸದೆ ಇದ್ದುದ್ದರಿಂದ ನಿಷ್ಕ್ರಿಯಗೊಳಿಸಲಾಗಿತ್ತು. ಸಂಘದ ಕಾರ್ಯಚಟುವಟಿಕೆಗಳು ಕುಂಠಿತಗೊಂಡಿದ್ದವು. ಗೊಂದಿ ಆಧುನೀಕರಣ ಯೋಜನೆ ಬಂದರೂ ಸಂಘವನ್ನು ಮುನ್ನಡೆಸಲು ಸಾಧ್ಯವಾಗಲಿಲ್ಲ. ಇದನ್ನು ಮನಗಂಡು ಢಣಾಯಕಪುರ ಗ್ರಾಮದ ಮುಖ್ಯಸ್ಥರಾದ ಶ್ರೀ ಹನುಮಂತಪ್ಪ, ಶ್ರೀ ಪರಮೇಶ್ವರಪ್ಪಗೌಡ್ರು ಹಾಗೂ ಪ್ರಸ್ತುತ ಅಧ್ಯಕ್ಷರಾದ ಶ್ರೀ ಚಂದ್ರಪ್ಪನವರ ಮುಂದಾಳತ್ವದಲ್ಲಿ ಗ್ರಾಮಗಳಲ್ಲಿ ಹಲವಾರು ಸಭೆಗಳನ್ನು ನಡೆಸಿ ಸಂಘವನ್ನು ಪುನರುಜ್ಜೀವನಗೊಳಿಸುವ ಬಗ್ಗೆ ಕಾರ್ಯಪ್ರವೃತ್ತರಾದೆವು. ಸಂಘದ ಎಲ್ಲಾ ವರ್ಷಗಳ ವಾರ್ಷಿಕ ಲೆಕ್ಕಪರಿಶೋಧನೆ ವರದಿಗಳನ್ನು ಸಿದ್ದಪಡಿಸಿಕೊಂಡು, ಸದಸ್ಯತ್ವ ವಸೂಲಿ ಮಾಡಿ ಕರ್ನಾಟಕ ನೀರಾವರಿ ನಿಗಮದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಯಿತು.

ಗ್ರಾಮದ ಮುಖಂಡರಾದ ಪಿ.ಪರಮೇಶ್ವರಪ್ಪಗೌಡರ ನೆನಪುಗಳ ಪ್ರಕಾರ 1948–49ನೇ ಸಾಲಿನಲ್ಲಿ ಗೊಂದಿ ನಾಲೆಯಿಂದ ನಮ್ಮ ಗ್ರಾಮಕ್ಕೆ ಸರಾಗವಾಗಿ ನೀರು ಹರಿಯುತ್ತಿತ್ತು. ಆದರೆ ಐದಾರು ವರ್ಷಗಳ ನಂತರ ನಾಲೆ ಹಾಳಾಗಿ ಹೂಳು ತುಂಬಿಕೊಂಡಿತು. ಅದಾಗಿ ಸುಮಾರು 50 ವರ್ಷಗಳವರೆಗೆ ಗ್ರಾಮದವರೇ ವಂತಿಗೆ ಹಣವನ್ನು ಜೋಡಿಸಿಕೊಂಡು ನಾಲೆಯಲ್ಲಿ ತುಂಬಿಕೊಂಡಿದ್ದ ಹೂಳನ್ನು ತೆಗೆಸಿ ಸರದಿ ಆಧಾರದ ಮೇಲೆ ಅಚ್ಚುಕಟ್ಟುದಾರರಿಗೆ ನೀರನ್ನು ಸರಬರಾಜು ಮಾಡುತ್ತಿದ್ದೆವು. ತದ ನಂತರ ಶಾಸಕರ ಅನುದಾನದಲ್ಲಿ ಮುಖ್ಯ ನಾಲೆಯಲ್ಲಿನ ಹೂಳನ್ನು ಮಾತ್ರ ತೆಗೆಸಿಕೊಡುತ್ತಿದ್ದರು. ಚಿಕ್ಕ ನಾಲೆಗಳಲ್ಲಿನ ಹೂಳನ್ನು ಆಯಾ ರೈತರೇ ಶ್ರಮವಹಿಸಿ ತೆಗೆದುಹಾಕುತ್ತಿದ್ದರು.

### ಸಂಘ ಸ್ಥಾಪನೆ

ಕರ್ನಾಟಕ ಸರ್ಕಾರ 2000ನೇ ಇಸವಿಯಲ್ಲಿ ರೈತ ಹಿತ ದೃಷ್ಟಿಯಿಂದ ನೀರು ಬಳಕೆದಾರರ ಸಹಕಾರ ಸಂಘಗಳ ಸ್ಥಾಪನೆಗೆ ಮುಂದಾಯಿತು. ಇದು ರಾಜ್ಯದಲ್ಲೇ ಮೊಟ್ಟ ಮೊದಲ ಪ್ರಾಯೋಗಿಕ ಪ್ರಯತ್ನ. ಹೆಕ್ಟೇರುವಾರು ಹಾಗೂ ಜನವಸತಿಗಳನ್ನು ಆಧರಿಸಿ ಇಂತಹ ಸಂಸ್ಥೆಗಳನ್ನು ರಚಿಸಲಾಗುತ್ತಿತ್ತು. ಅದರ ಪ್ರತಿಫಲವಾಗಿ ಈ ಗ್ರಾಮದಲ್ಲೂ 27–11–2000ರಂದು ನೀರು ಬಳಕೆದಾರರ ಸಹಕಾರ ಸಂಘ ಆರಂಭವಾಯಿತು (ಸಂಖ್ಯೆ ಭದ್ರಾ ಕಾಡಾ ಎಆರ್./ಭದ್ರಾ ಕಾಡಾ/ಆರ್‌ಜಿಎನ್/29966). ಸಂಘದ ವ್ಯಾಪ್ತಿಯಲ್ಲಿ 4 ಗ್ರಾಮಗಳಿದ್ದು, 340.93 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವಿದೆ. ಗೊಂದಿ ಯೋಜನೆ ಬಂದ ನಂತರ ದಿನಾಂಕ 11.01.2017ರಂದು ಕರ್ನಾಟಕ ನೀರಾವರಿ ನಿಗಮದೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲಾಯಿತು.

### ಸದಸ್ಯತ್ವ ಶುಲ್ಕ ಮತ್ತು ವಂತಿಕೆ

ಗ್ರಾಮದ ಮುಖಂಡರುಗಳು ಅಚ್ಚುಕಟ್ಟುದಾರರ ಮನವೊಲಿಸಿ ಸದಸ್ಯತ್ವ ವಸೂಲಿ ಮಾಡಲಾಗುತ್ತಿದೆ. ಒಟ್ಟು 275 ಜನ ಅಚ್ಚುಕಟ್ಟುದಾರರ ಪೈಕಿ ಗೊಂದಿ ಆಧುನೀಕರಣ ಆರಂಭಕ್ಕೆ ಮುನ್ನ ಕೇವಲ 150 ರೈತರು ಮಾತ್ರ ಸದಸ್ಯರಾಗಿದ್ದರು. ಪ್ರಸ್ತುತ 240 ರೈತರು ಸದಸ್ಯತ್ವ ಪಡೆದಿದ್ದಾರೆ. ರೂ. 35000 ಸದಸ್ಯತ್ವ ಶುಲ್ಕ ಸಂಗ್ರಹಿಸಲಾಗಿದೆ. ಅಲ್ಲದೆ ಅಚ್ಚುಕಟ್ಟು ಪ್ರದೇಶದ ಕಾಲುವೆಗಳ ಉಸ್ತುವಾರಿ ಮತ್ತು ನಿರ್ವಹಣೆ ಮಾಡಲು ಸಂಪನ್ಮೂಲ ಕ್ರೋಢೀಕರಣದ ದೃಷ್ಟಿಯಿಂದ ನೀರಿನ ಶುಲ್ಕ ವಸೂಲು ಮಾಡಲು ತೀರ್ಮಾನಿಸಿದ್ದು ಈಗಾಗಲೇ ಹಲವು ರೈತರು ಶುಲ್ಕ ಪಾವತಿಸಿದ್ದಾರೆ. ಇದರ ಜೊತೆಗೆ ಭದ್ರಾ ಕಾಡಾದಿಂದ ಬರುವ ವಂತಿಕೆ ಹಣದ ನಿರೀಕ್ಷೆ ಮಾಡಲಾಗುತ್ತಿದೆ.

### ಸಂಘಕ್ಕೆ ಸ್ವಂತ ಕಟ್ಟಡ ಕಟ್ಟಲು ಜಾಗ ಖರೀದಿ

ಪ್ರತಿ ಸಂಘವೂ ಆಡಳಿತಾತ್ಮಕವಾಗಿ ಸುಸ್ಥಿರತೆಯನ್ನು ಕಾಪಾಡಿಕೊಳ್ಳಲು ಸ್ವಂತ ಕಟ್ಟಡದ ಅವಶ್ಯಕತೆ ಇರುತ್ತದೆ. ಗೊಂದಿ ಯೋಜನೆಯಲ್ಲಿ ಸ್ವಂತ ಕಟ್ಟಡ ಹೊಂದಲು ಹಣಕಾಸು ನೆರವು ದೊರೆಯುತ್ತಿದೆ. ಆದರೆ ಸ್ಥಳವನ್ನು ಹೊಂದಿಸುವ ಜವಾಬ್ದಾರಿ ಸಂಘದ್ದಾಗಿರುತ್ತದೆ. ಇದಕ್ಕಾಗಿ ಕಾರ್ಯಕಾರಿ ಸಮಿತಿಯು ಸ್ಥಳೀಯ ಗ್ರಾಮಪಂಚಾಯಿತಿ ಸದಸ್ಯರ ಮನವೊಲಿಸಿ ಸ್ವಂತ ಕಟ್ಟಡ ಕಟ್ಟಲು ನಿವೇಶನ ಬೇಕೆಂದು ಮನವಿ ಮಾಡಿತು. ಇದಕ್ಕೆ ಗ್ರಾಮ ಪಂಚಾಯ್ತಿಯು ಒಪ್ಪಿ 30x40 ಅಡಿ ಅಳತೆಯ ನಿವೇಶನವನ್ನು ನೀಡಿತು. 5000 ರೂ.ಗಳನ್ನು ಸರ್ಕಾರಕ್ಕೆ ಪಾವತಿಸಿ ಈ ನಿವೇಶನವನ್ನು ಮಂಜೂರು ಮಾಡಿಸಿಕೊಳ್ಳಲಾಗಿದೆ.



### ಕಾರ್ಯಕಾರಿ ಸಮಿತಿ ಸಭೆ ಮತ್ತು ವಾರ್ಷಿಕ ಮಹಾಸಭೆ

ಕಾರ್ಯಕಾರಿ ಸಮಿತಿ ಸಭೆಯನ್ನು ಪ್ರತಿ ತಿಂಗಳು ತಪ್ಪದೆ ಸಭೆಯನ್ನು ನಡೆಸುತ್ತಾ ಬರಲಾಗುತ್ತಿದೆ. ಪ್ರತಿ ವರ್ಷ ತಪ್ಪದೇ ಲೆಕ್ಕ ಪರಿಶೋಧನಾ ವರದಿ ತಯಾರಿಸಿ ವಾರ್ಷಿಕ ಮಹಾ ಸಭೆಯಲ್ಲಿ ಸದಸ್ಯರ ಮುಂದೆ ಮಂಡನೆ ಮಾಡಲಾಗುತ್ತಿದೆ.

### ಗೊಂದಿ ಆಧುನೀಕರಣ ಯೋಜನೆಯಲ್ಲಿ ಪಾಲ್ಗೊಳ್ಳುವಿಕೆ

ಗೊಂದಿ ಯೋಜನೆಯಲ್ಲಿ ಸಂಘಕ್ಕೆ 12 ಅಚ್ಚುಕಟ್ಟು ಪ್ಯಾಕೇಜ್‌ಗಳ ಕಾಮಗಾರಿ ಮಾಡಲು 2,18,19,137.10 ರೂ. ನೆರವು ದೊರೆತಿದೆ. ಕಾಮಗಾರಿ ಪ್ರಾರಂಭಿಸುವ ಮೊದಲು ಭದ್ರಾ ಕಾಡಾದ ಅಧಿಕಾರಿಗಳೊಂದಿಗೆ ಸಂಘದ ಸದಸ್ಯರು ಪ್ರತಿ ಅಚ್ಚುಕಟ್ಟು ಕಾಲುವೆಗಳ ಸ್ಥಳ ಪರಿಶೀಲನೆ ಮಾಡಿ ಅಂದಾಜುಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈಗ ರೈತರ ಹೊಲಗಾಲುವೆಗಳು ಅಭಿವೃದ್ಧಿಗೊಳ್ಳುತ್ತಿವೆ. ಕಾಮಗಾರಿಗಳ ಅನುಷ್ಠಾನ ಮತ್ತು ಉಸ್ತುವಾರಿ ನಿರ್ವಹಣೆ ಮಾಡಲು ಗ್ರಾಮವಾರು ಮಹಿಳಾ ಮತ್ತು ಕಾಮಗಾರಿ ನಿರ್ವಹಣೆಗೆ ಉಪಸಮಿತಿ ರಚನೆ ಮಾಡಿದೆ. ಆಯಾ ಭಾಗದ ರೈತರೆ ಖುದ್ದಾಗಿ ನಿಂತು ಕಾಮಗಾರಿಗಳ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ಕಾಮಗಾರಿ ಅನುಷ್ಠಾನಗೊಳಿಸಲು ಗುತ್ತಿಗೆದಾರರಿಗೆ ನೀಡುವುದಿಲ್ಲ, ಬದಲಿಗೆ ಸಂಘದವರೇ ನಿರ್ವಹಿಸುತ್ತಾರೆ. ಕರ್ನಾಟಕ ನೀರಾವರಿ ನಿಗಮವು ಗೊಂದಿ ಅಚ್ಚುಕಟ್ಟು ಪ್ರದೇಶಗಳ ಆಧುನೀಕರಣದ ಉಸ್ತುವಾರಿಯನ್ನು ಭದ್ರಾ ಕಾಡಾದ ಇಂಜಿನಿಯರ್ ವಿಭಾಗಕ್ಕೆ ನೀಡಿರುತ್ತದೆ. ಏಷಿಯನ್ ಡೆವಲಂಪ್‌ಮೆಂಟ್ ಬ್ಯಾಂಕ್ ನೀಡಿದ ಆರ್ಥಿಕ ಸಹಾಯದಿಂದ ಹಾಗೂ ಇಂಜಿನಿಯರ್‌ಗಳ ಪರಿಶ್ರಮದಿಂದ ಈ ಯೋಜನೆ ಯಶಸ್ವಿಯಾಗುತ್ತ ಸಾಗುತ್ತಿದೆ.



ಬೀದಿ ನಾಟಕದ ಮೂಲಕ ನೀರಿನ ಮಹತ್ವದ ಅರಿವು

ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಮತ್ತು ರೈತರಿಗೆ ನೀರಿನ ಅವಶ್ಯಕತೆಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪ್ರತಿ ಸಂಘದ ವ್ಯಾಪ್ತಿಯಲ್ಲಿ ಬರುವ ಒಂದು ಹಳ್ಳಿಯನ್ನು ಆಯ್ಕೆ ಮಾಡಿಕೊಂಡು ಬೀದಿ ನಾಟಕವನ್ನು ಹಮ್ಮಿಕೊಳ್ಳಲಾಗಿತ್ತು. ಬೀದಿ ನಾಟಕದ ಮೂಲಕ ನೀರಿನ ಮಿತ ಬಳಕೆಯ ಬಗ್ಗೆ ಅರಿವು ಮೂಡಿಸಲಾಯಿತು.

### ಯೋಜನಾ ಸಹಾಯ ಸಂಸ್ಥೆಯ ಪಾತ್ರ

ಸಂಘಗಳನ್ನು ಸುಸ್ಥಿರವಾಗಿ ಬಲಪಡಿಸಲು ನೇಮಕವಾಗಿರುವ 'ಸ್ಮೆಕ್' ಯೋಜನಾ ಸಹಾಯ ಸಂಸ್ಥೆಯು ಎಲ್ಲಾ ಸಹಕಾರ ಸಂಘಗಳನ್ನು ಸುಸ್ಥಿರವಾಗಿಡಲು ಪರಿಶ್ರಮಿಸುತ್ತಿದೆ. ನಿರಂತರ ತರಬೇತಿ, ಅಧ್ಯಯನ ಪ್ರವಾಸ, ವಿವಿಧ ಇಲಾಖೆಗಳೊಂದಿಗೆ ಸಂವಾದಗಳನ್ನು ಏರ್ಪಡಿಸುವ ಮೂಲಕ ಸಾಮರ್ಥ್ಯಬಲವರ್ಧನೆಗಾಗಿ ಹಲವು ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ನಿರ್ವಹಣೆ ವರ್ಗಾವಣೆ ಪ್ರಕ್ರಿಯೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಈ ರೀತಿಯ ತರಬೇತಿಗಳನ್ನು ನಿಯಮಿತವಾಗಿ ಎಲ್ಲಾ ಸಂಘಗಳಿಗೂ ಹಮ್ಮಿಕೊಳ್ಳಲಾಗುತ್ತಿದೆ.

ಪ್ರದೀಪ್, ಕಾರ್ಯದರ್ಶಿ, ಶ್ರೀ ವೀರಭದ್ರೇಶ್ವರ ನೀರು ಬಳಕೆದಾರರ ಸಹಕಾರ ಸಂಘ, ಹೊಳೆ ಹೊನ್ನೂರು




## ಸಹಭಾಗಿತ್ವ ನೀರು ನಿರ್ವಹಣೆ ತರಬೇತಿ

ದೊಡ್ಡಗೊಪ್ಪೇನಹಳ್ಳಿ ನೀರು ಬಳಕೆದಾರರ ಸಹಕಾರ ಸಂಘದ ವ್ಯಾಪ್ತಿಯ ಉಜ್ಜನಿಪುರದಲ್ಲಿ ದಿನಾಂಕ 30-09-2018ರಂದು ನೀರಾವರಿ ನಿರ್ವಹಣೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

# ನೀರಿನ ಉಳಿತಾಯ ಮತ್ತು ಹೆಚ್ಚಿನ ಪ್ರದೇಶಕ್ಕ ನೀರಾವರಿ

ಗೊಂದಿ ಆಧುನೀಕರಣ ಯೋಜನೆಯ ಮುಖ್ಯ ಉದ್ದೇಶ ಕೃಷಿ ಉತ್ಪಾದನೆ ಹೆಚ್ಚಿಸುವುದು, ನೀರಿನ ಉಳಿತಾಯ ಮತ್ತು ನೀರಿನ ಸಂರಕ್ಷಣೆ ಹಾಗೂ ಮಿತ ಬಳಕೆ ಮತ್ತು ಸಂಘಗಳಿಗೆ ಉಸ್ತುವಾರಿ ಮತ್ತು ನಿರ್ವಹಣೆ ಜವಾಬ್ದಾರಿಯನ್ನು ವಹಿಸುವುದು. ಯೋಜನೆ ಮುಕ್ತಾಯಕ್ಕೆ ಕೆಲವು ತಿಂಗಳು ಬಾಕಿ ಇರುವ ಈ ಸಮಯದಲ್ಲಿ ಅದರ ಸಾಧನೆಯನ್ನು ಅವಲೋಕಿಸಿದಾಗ ಕಂಡುಬಂದ ಮಾಹಿತಿಗಳಿವು.

ಕರ್ನಾಟಕ ನೀರಾವರಿ ನಿಗಮದ ಸಹಾಯಕ ಅಭಿಯಂತರ ರಾದ ಶ್ರೀ ಉಮೇಶ್ ಅವರು ನೀಡುವ ಮಾಹಿತಿಯಂತೆ, 2017ರ ಬೇಸಿಗೆಯಲ್ಲಿ 120 ದಿನಗಳು ನೀರು ಬಿಟ್ಟಾಗ ಪ್ರತಿ ಸೆಕೆಂಡಿಗೆ 2.65 ಕ್ಯೂಸೆಕ್ಸ್ ನೀರು ಗೊಂದಿ ಕಾಲುವೆಯಲ್ಲಿ ಹರಿದಿರುತ್ತದೆ. ಒಟ್ಟು 31800 ಕ್ಯೂಸೆಕ್ಸ್ ನೀರನ್ನು ಅಚ್ಚುಕಟ್ಟಿಗೆ ಬಿಡಲಾಗಿತ್ತು. ಅದೇ ರೀತಿ 2018ರ ಬೇಸಿಗೆಯಲ್ಲಿ 120 ದಿನ ನೀರು ಬಿಟ್ಟಾಗ ಪ್ರತಿ ಸೆಕೆಂಡ್‌ಗೆ 1.46 ಕ್ಯೂಸೆಕ್ಸ್ ಮಾತ್ರ ನೀರು ಬಿಡಲಾಗಿತ್ತು. ಅಂದರೆ ಒಟ್ಟು 17,520 ಕ್ಯೂಸೆಕ್ಸ್ ನೀರನ್ನು ಅಚ್ಚುಕಟ್ಟಿಗೆ ಬಿಡಲಾಗಿದೆ. 2017ನೇ ಇಸವಿಗೆ ಹೋಲಿಸಿದಾಗ 2018ರ ಬೇಸಿಗೆಯಲ್ಲಿ 14,280 ಕ್ಯೂಸೆಕ್ಸ್ ನೀರು ಉಳಿತಾಯವಾಗಿದೆ. ಅಂದರೆ ಶೇ.30ರಷ್ಟು ನೀರು ಉಳಿತಾಯವಾದಂತಾಯಿತು.

ಸಾಮಾನ್ಯವಾಗಿ ಕೊನೆಯ ಅಚ್ಚುಕಟ್ಟು ಅಂದರೆ ಕಾಲುವೆ ಕೊನೆಯ ಭಾಗದದಲ್ಲಿ ಬರುವ ಅಚ್ಚುಕಟ್ಟು ಎಂಬ ಭಾವನೆ ಇರುತ್ತದೆ. ಆದರೆ ಗೊಂದಿ ಅಚ್ಚುಕಟ್ಟಿನಲ್ಲಿ ಪ್ರತಿಯೊಂದು ಸಂಘದ ಅಚ್ಚುಕಟ್ಟು ಪ್ರದೇಶದಲ್ಲಿ ಕಾಲುವೆ ತುದಿ ಭಾಗದ ಹಲವು ರೈತರಿಗೆ ನೀರಿನ ಕೊರತೆ ಇರುತ್ತಿತ್ತು. ಇದರಿಂದ ಅವರು ಎರಡು ಬೆಳೆ ಬೆಳೆಯಲು ಅಗುತ್ತಿರಲಿಲ್ಲ. ಗೊಂದಿ ಆಧುನೀಕರಣ ಯೋಜನೆ ಯಿಂದ ಈ ಸಮಸ್ಯೆಗೆ ಪರಿಹಾರ ದೊರಕಿದ್ದು ಪ್ರತಿಯೊಬ್ಬರಿಗೂ ನೀರು ದೊರಕಿದೆ.

ಅಲ್ಲದೆ ಈ ಯೋಜನೆಯಿಂದ ಆಗಿರುವ ಮತ್ತೊಂದು ಮಹತ್ವದ ಬದಲಾವಣೆ ಎಂದರೆ ಒಟ್ಟು 1735 ಎಕರೆಗೆ (648 ಹೆಕ್ಟೇರ್) ಹೆಚ್ಚುವರಿಯಾಗಿ ನೀರು ಸಿಕ್ಕಿರುವುದು. ವಿನ್ಯಾಸಿತ ಅಚ್ಚುಕಟ್ಟು ವ್ಯಾಪ್ತಿಯಲ್ಲಿದ್ದರೂ ಸಹ ನೀರಿನ ಕೊರತೆ ಹಾಗೂ ಕಾಲುವೆಗಳು ಹದಗೆಟ್ಟಿದ್ದರಿಂದ ಎಷ್ಟೋ ರೈತರಿಗೆ ಗೊಂದಿ ಅಣೆಕಟ್ಟೆ ನೀರು ತಲುಪುತ್ತಿರಲಿಲ್ಲ. ಆಧುನೀಕರಣದ ನಂತರ ಎಲ್ಲಾ ಕಾಲುವೆಗಳನ್ನೂ ಸಿಮೆಂಟ್ ಲೈನಿಂಗ್ ಮಾಡಲಾಗಿದೆ, ಅಲ್ಲದೆ



ಕೆಲವು ವೇಳೆ ಮೂಲ ಕ್ರಿಯಾ ಯೋಜನೆಯಲ್ಲಿ ಬಿಟ್ಟುಹೋದ ಕಾಲುವೆಗಳನ್ನೂ ರೈತರು ಇಲಾಖೆಯ ಗಮನಕ್ಕೆ ತಂದು ಲೈನಿಂಗ್ ಮಾಡಿಸಿದ್ದಾರೆ. ಇದರಿಂದಾಗಿ ಹೆಚ್ಚುವರಿ ಅಚ್ಚುಕಟ್ಟಿಗೆ ನೀರು ಲಭಿಸಿದೆ. ಸಂಘವಾರು ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ. | ಸಂಘದ ಹೆಸರು | ಹೆಚ್ಚುವರಿ ನೀರು ದೊರೆತ ಪ್ರದೇಶ(ಎಕರೆ) |
|---|---|---|
| 1 | ನಾಗತಿ ಬೆಳಗಲು | 150 |
| 2 | ಮೂಡಲವಿಠಲಾಪುರ | 100 |
| 3 | ಸೀಗೆಬಾಗಿ | 100 |
| 4 | ದೊಡ್ಡಗೊಪ್ಪೇನಹಳ್ಳಿ | 150 |
| 5 | ಕೊಪ್ಪದೊಡ್ಡಕೆರೆ | 100 |
| 6 | ಬಾಬಳ್ಳಿ | 125 |
| 7 | ದಾಸರಕಲ್ಲಳ್ಳಿ | 500 |
| 8 | ಢಣಾಯಕಪುರ | 70 |
| 9 | ಬಾರಂದೂರು | 115 |
| 10 | ಕಾಗೇಕೊಡಮಗ್ಗಿ | 125 |
| 11 | ತಳ್ಳಿಕಟ್ಟೆ | 200 |
| | ಒಟ್ಟು | 1,735 |

ಮೊದಲು ಈ ಭೂಮಿಯಲ್ಲಿ ಒಣ ಬೇಸಾಯ ಮಾಡುತ್ತಿದ್ದರು ಅಥವಾ ಹಣ ಖರ್ಚು ಮಾಡಿ ಪೈಪ್‌ಲೈನ್ ಮೂಲಕ ನೀರು ಹಾಯಿಸುತ್ತಿದ್ದರು. ಈ ಬಗ್ಗೆ ಕೆಲವು ಸಂಘಗಳ ಪದಾಧಿಕಾರಿಗಳು ಮತ್ತು ರೈತರು ತಮ್ಮ ಅನುಭವ, ಅನಿಸಿಕೆ ಗಳನ್ನು ಹಂಚಿಕೊಂಡಿದ್ದು ಅದನ್ನು ಇಲ್ಲಿ ನೋಡಬಹುದು.

### 1) ಯಶವಂತ್, ಸದಸ್ಯರು, ಮೂಡಲವಿಠಲಾಪುರ ನೀರು ಬಳಕೆದಾರರ ಸಹಕಾರ ಸಂಘ



'ನಮ್ಮ ಸಂಘದ ಕೊನೆಯ ಭಾಗದ ಅಚ್ಚುಕಟ್ಟಿನಲ್ಲಿ ನೂರಮೂವತ್ತು ಎಕರೆ ಜಮೀನಿದ್ದು ಅದರಲ್ಲಿ 40 ಎಕರೆಗೆ ನೀರು ದೊರೆಯುತ್ತಿರಲಿಲ್ಲ, ಕೆಲವರು ಬೋರ್‌ವೆಲ್‌ಗಳನ್ನು ಕೊರೆಸಿಯು ಸಹ ನೀರು ದೊರಕುತ್ತಿರಲಿಲ್ಲ. ನೀರು ಸಿಗದೆ ಇರುವ ಕಾರಣದಿಂದ ಬಹಳಷ್ಟು ರೈತರು ಜಮೀನನ್ನು ಮಾರಿದ್ದರು. ನನಗೆ 7.5 ಎಕರೆ ಜಮೀನಿದ್ದು 3 ಬೋರ್‌ವೆಲ್ ಗಳನ್ನು ಕೊರೆಸಿದ್ದೆ. ಅದರಲ್ಲಿ ಎರಡರಲ್ಲಿ ಮಾತ್ರ ಸ್ವಲ್ಪ ನೀರು ಸಿಗುತ್ತಿತ್ತು. ಜಮೀನಿಗೆ ನೀರನ್ನು ಹಾಯಿಸಲು ಬಹಳಷ್ಟು ಕಷ್ಟ ಪಡುತ್ತಿದ್ದೆವು. ಪೂರ್ತಿ ಜಮೀನಿಗೆ ನೀರು ಹಾಯಿಸಲು 15 ದಿವಸ ಬೇಕಾಗುತ್ತಿತ್ತು. ಕೆಲವೊಮ್ಮೆ ನೀರಿನ ಕೊರತೆಯಿಂದಾಗಿ ಭತ್ತದ ಬೆಳೆ ಒಣಗಿ ಹೋಗುತ್ತಿತ್ತು. ಗೊಂದಿ ಆಧುನೀಕರಣ ಆದ ನಂತರ 40 ಎಕರೆ ಜಮೀನಿ ನಲ್ಲಿ ಬಹಳಷ್ಟು ರೈತರು 20 ವರ್ಷದಿಂದ ಬೀಳು ಬಿಟ್ಟಿದ್ದ ಜಮೀನಿನಲ್ಲಿ ಮತ್ತೆ ಉಳುಮೆ ಮಾಡಲು ಪ್ರಾರಂಭಿಸಿದ್ದಾರೆ'.

**2) ರಾಮಯ್ಯ, ರೈತರು, ನಾಗತಿಬೆಳಗಲು ನೀರು ಬಳಕೆದಾರರ ಸಹಕಾರ ಸಂಘ**



'2018ರಲ್ಲಿ ಬೇಸಿಗೆ ಬೆಳೆ ಹಾಗೂ 2019ರ ಮುಂಗಾರು ಬೆಳೆಯನ್ನು ಬೆಳೆದಿದ್ದೇನೆ. ಕಾರಣ ನೀರು ಸಿಗುವುದು ಖಚಿತವಾಗಿದೆ. ಬಹಳಷ್ಟು ರೈತರು ನೀರಿಗಾಗಿ ಹಗಲು–ರಾತ್ರಿ ಕಾಯುತ್ತಾ ಇದ್ದರು ಮತ್ತು ಇದಕ್ಕಾಗಿ ಜಗಳವಾಡಿ ಪೋಲಿಸ್ ಸ್ಟೇಷನ್ ಮೆಟ್ಟಿಲು ಹತ್ತಿರುವ ಉದಾಹರಣೆಗಳಿವೆ. ಕಳೆದ 20 ವರ್ಷಗಳ ಹಿಂದೆ ನಮ್ಮ ಸಂಘದ ವ್ಯಾಪ್ತಿಯಲ್ಲಿ ಬರುವ ನಾಗತಿಬೆಳಗಲು, ತಾಂಡ, ಕುಮರಿನಾರಾಯಣಪುರ ಮತ್ತು ಹೊಸಹಳ್ಳಿ ಗ್ರಾಮಗಳ ಬೇಸಿಗೆ ಬೆಳೆಗೆ ನೀರಿನ ಕೊರತೆ ಉಂಟಾದಾಗ 4 ಗ್ರಾಮಗಳ 40 ರೈತರು 2 ದಿವಸ ಟ್ರ್ಯಾಕ್ಟರ್‌ಗಳನ್ನು ತೆಗೆದುಕೊಂಡು ಹೋಗಿ ಗೊಂದಿ ಅಣೆಕಟ್ಟಿಗೆ ಅಡ್ಡಲಾಗಿ 5 ಅಡಿ ಎತ್ತರದ ಮರಳು ಚೀಲಗಳನ್ನು ಜೋಡಿಸಿ ತಾತ್ಕಾಲಿಕವಾಗಿ ಎತ್ತರ ಮಾಡಿ ನಮ್ಮ ಗ್ರಾಮಗಳ ಅಚ್ಚುಕಟ್ಟಿನ ಭತ್ತ ಮತ್ತು ಕಬ್ಬಿನ ಬೆಳೆಗೆ ನೀರನ್ನು ತಂದಿದ್ದೆವು'.

**3) ಸಾವಿತ್ರಮ್ಮ, ರೈತ ಮಹಿಳೆ, ಬೊಮ್ಮೇನಹಳ್ಳಿ ಬಾರಂದೂರು ನೀರು ಬಳಕೆದಾರರ ಸಹಕಾರ ಸಂಘ**



'ನಾವು ಮೊದಲು ಬಾಳೆ ಬೆಳಿತಿದ್ವಿ, ನಂತರ ಅಡಿಕೆ ಹಾಕಿದ್ವಿ. ಸರಿಯಾಗಿ ನೀರು ಬರ್ತಿಲಿಲ್ಲ. ತೋಟಗಳಿಗೆ ನೀರು ಬಿಟ್ರೆ ಒಂದು ಸಮವಾಗಿ ನೀರು ಆಯ್ಕೋಳ್ತಿರಲಿಲ್ಲ. ಆಕಡೆ ಈಕಡೆ ಹೋಗೊದು. ಈಗ ಕಾಲುವೆ ಮಾಡಿರುವುದರಿಂದ ನಾವು ಯಾವ ಕಡೆ ನೀರ್ ಬಿಡ್ಬೇಕೊ ಆ ಕಡೆ ಕಟ್ಟೆ ಹಾಕಿಕೊಂಡು ನೀರನ್ನು ಆಯಿಸ್ಕೋತೀವಿ. ಅದರಿಂದ ನಮಗೆ ಹಾಗೂ ಜಮೀನಿಗೆ ಅನುಕೂಲವಾಗಿದೆ. ಅಲ್ಲದೆ ಹೆಣ್ಣು ಮಕ್ಕಳಿಗೆ ಈ ಕಾಮಗಾರಿ ಮಾಡ್ಕೊಳ್ಳೋಕೆ ಅವಕಾಶ ಕೊಟ್ಟಿರೋದು ತುಂಬಾ ಅನುಕೂಲ ಆಗಿದೆ. ಹೆಣ್ಣು ಮಕ್ಕಳುಗಳು ಕೂಡ ಬಂದು ಇದನ್ನ ಸರಿಯಾದ್ ರೀತಿಲಿ ಕೆಲಸ ಮಾಡ್ತಿದಿರಾ ಅಂತ ನೋಡ್ಕೊಬಹುದು. ನಮ್ಮ ಜಮೀನಿಗೆ ನೀರು ಆಯ್ಕೋಳ್ಳೊತ್ತೊ ಇಲ್ವೊ ಅಂತ ನಮಗೂ ಸಹ ತಿಳುವಳಿಕೆ ಆಗುತ್ತೆ. ನಾವೇ ನಿಂತು ಜಮೀನುಗಳಿಗೆ ನೀರು ಆಯಿಸಬಹುದು. ಇಷ್ಟು ದಿನ ಬರೀ ಗಂಡಸರೇ ಕಾಮಗಾರಿ ನಿರ್ವಹಿಸುತ್ತಾ ಇದ್ರು, ಈಗ ನಾವು ಕೂಡ ನಿರ್ವಹಿಸಬಹುದು ಅನ್ನೋದನ್ನ ನಾವು ಇದರಿಂದ ಕಲಿತುಕೊಂಡಿದ್ದೇವೆ'.

**4) ಪ್ರಭು, ರೈತರು, ಮಾರುತಿ ನಗರ, ಬಾರಂದೂರು ನೀರು ಬಳಕೆದಾರರ ಸಹಕಾರ ಸಂಘ**



'ನಮಗೆ ಗೊಂದಿ ಕಾಲುವೆ ಪಕ್ಕ ದಲ್ಲೆ 2 ಎಕರೆ ಜಮೀನಿದೆ. ಮುಂಚೆ ಭತ್ತ ಮಾಡುತ್ತಿದ್ದೆವು. ರಾತ್ರಿ ಎಲ್ಲಾ ನೀರು ಬಿಟ್ಟರೂ ಸಾಕಾಗುತ್ತಿರಲಿಲ್ಲ. ಕಾಲುವೆಯಲ್ಲಾ ಮುಚ್ಚೋಗಿತ್ತು. ಅದ್ರಿಂದ ನಮಗೆ ಬಾರಿ ಕಷ್ಟ ಆಗೋದು. ಕಾಲುವೆ ತೂತ ಬಿದ್ದು ನೀರು ಎಲ್ಲಿ ಬೇಕು ಅಲ್ಲಿ ಹೋಗೊದು. ಆವಾಗ ಪಂಪ್‌ಸೆಟ್ ಹಾಕಿ ಹಳ್ಳ–ಕೊಳ್ಳದಿಂದ ಹೊಡಿತಿದ್ವಿ, ಇದಕ್ಕೆ ಸಾವಿರಾರು ರುಪಾಯಿ ಡೀಸೆಲ್, ಮೋಟರ್ ಅಂತ ಖರ್ಚು ಆಗುತ್ತಿತ್ತು. ಒಂದು ಬೆಳೆಗೆ 6–10 ಸಾವಿರ ಖರ್ಚು ಬರೋದು. ಈಗ ಕಾಲುವೆ ಆಗಿರುವುದ ರಿಂದ ತೊಂದರೆ ಇಲ್ಲ. ಬಿಟ್ಟ ಕೂಡಲೆ ನೀರು ಬರುತ್ತೆ. ಕಾಲುವೆಯನ್ನು ತುಂಬಾ ಚೆನ್ನಾಗಿ ಮಾಡಿದ್ದಾರೆ. ನೀರು ಎಲ್ಲೂ ಲೀಕೇಜ್ ಆಗ್ತಾ ಇಲ್ಲ. ನೀರು ಚೆನ್ನಾಗಿ ಮುಂದೆ ಹೋಗುತ್ತಿದೆ. ಉತ್ತಮ ಗುಣಮಟ್ಟದ ಜೆಲ್ಲಿ, ಸಿಮೆಂಟ್, ಮರಳು ಹಾಕಿ ಗುಣಮಟ್ಟದ ಕಾಮಗಾರಿ ಮಾಡಿರುವುದರಿಂದ ಯಾವುದೇ ತೊಂದರೆ ಇಲ್ಲಾ. ಜನರೇ ನಿಂತು ಕಾಲುವೆ ಮಾಡಿಸಿರುವುದು'.

**5) ಮಂಜು, ರೈತರು, ದೊಡ್ಡಗೊಪ್ಪೆನಹಳ್ಳಿ ನೀರು ಬಳಕೆದಾರರ ಸಹಕಾರ ಸಂಘ**



'ಈ ಯೋಜನೆಯಿಂದ ನಮ್ಮ ಹಳ್ಳಿಯ 30–35 ಎಕರೆ ಜಮೀನುಗಳಿಗೆ ಆಯುವರಿ ಆಗುತ್ತೆ. 18–20 ಜನ ರೈತರು ಬರುತ್ತಾರೆ. ಆವಾಗ ಅಂದ್ರೆ ದಿನಾ ಕಾಯಬೇಕಿತ್ತು. ಈಗ ಒಬ್ಬರಿಗೆ ಒಂದು ಗಂಟೆಯಂತೆ ನೀರು ಸಾಕಾಗುತ್ತದೆ. ಕಬ್ಬು, ಭತ್ತ, ಅಡಿಕೆ ತೋಟ ಇದೆ. ಮೊದಲು ನೀರಿನ ಸಮಸ್ಯೆ ಬಹಳ ಇತ್ತು. ರಾತ್ರಿ ಹೊತ್ತು ಬಂದು ನೀರನ್ನು ಬಿಡಬೇಕಿತ್ತು. ಇಲ್ಲೆ ಮಲಗಬೇಕಿತ್ತು. ಊಟಕ್ಕೆ ಅಂತ ಮನೆಗೆ ಹೋಗಿ ಬರುವಷ್ಟರಲ್ಲಿ ಬೇರೆಯವರು ತಿರುವಿಕೊಂಡು ಹೋಗುತ್ತಿದ್ದರು. ಇದರಿಂದ ಜಗಳ ಆಗುತ್ತಿತ್ತು. ಈಗ ಆ ಸಮಸ್ಯೆ ಇಲ್ಲ.

**6) ಪ್ರದೀಪ್, ರೈತರು ಮತ್ತು ಕಾರ್ಯದರ್ಶಿ ಢಣಾಯಕಪುರ, ಶ್ರೀ ವೀರಭದ್ರೇಶ್ವರ ನೀರು ಬಳಕೆದಾರರ ಸಹಕಾರ ಸಂಘ, ಹೊಳೆಹೊನ್ನೂರು**



'ಗೊಂದಿ ಆಧುನೀಕರಣ ಮಾಡುವುದಕ್ಕಿಂತ ಮೊದಲು ನಮ್ಮ ಸಂಘದ ವ್ಯಾಪ್ತಿಯ ಅಚ್ಚುಕಟ್ಟಿಗೆ ಕಾಲುವೆಗಳನ್ನು ಪ್ರತಿ 6 ತಿಂಗಳಿಗೊಮ್ಮೆ ಸ್ವಚ್ಛಗೊಳಿಸಲು ಪ್ರತಿ ರೈತರಿಂದ ರೂ. 250ಗಳನ್ನು ವಸೂಲಿ ಮಾಡುತ್ತಿದ್ದೆವು. ಕೆಲವೊಮ್ಮೆ ನಮ್ಮ ಕ್ಷೇತ್ರದ ಎಮ್.ಎಲ್.ಎ. ಅವರನ್ನು ಭೇಟಿಮಾಡಿ ಕಾಲುವೆಗಳ ಹೂಳು ತೆಗೆಯಲು ಮನವಿ ಮಾಡಿ ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದೆವು. ಮೊದಲು 20 ದಿನದ ಮೊದಲೇ ನಮ್ಮ ಜಮೀನುಗಳಿಗೆ ಯಾವಾಗ ನೀರು ದೊರಕುತ್ತದೆ ಎಂದು ಕಾದು ಕುಳಿತುಕೊಳ್ಳಬೇಕಾಗಿತ್ತು. ಬೇಸಿಗೆ ಬೆಳೆಗೆ ನೀರು ಸಿಗದೆ ಅರೆಖುಷ್ಕಿ ಬೆಳೆಯನ್ನು ಬೆಳೆಯುತ್ತಿದ್ದೆವು. ಈಗ ನಮಗೆ 2 ದಿನಕ್ಕೆ ನೀರು ದೊರೆಯುತ್ತಿದೆ, ಕಾಲುವೆಗಳನ್ನು ಸ್ವಚ್ಛಗೊಳಿಸುವ ಅವಶ್ಯಕತೆ ಇಲ್ಲ, ಈಗ ವರ್ಷಕ್ಕೆ 2 ಭತ್ತದ ಬೆಳೆಯನ್ನು ಬೆಳೆಯುತ್ತಿದ್ದೇವೆ'.

ಇದೇ ರೀತಿ ನೀರು ನಿರ್ವಹಣೆ ವ್ಯವಸ್ಥೆ ಮಾಡಿ ಎಲ್ಲಾ ಕಾಲುವೆಗಳಿಗೆ ಗೇಟುಗಳನ್ನು ಅಳವಡಿಸಿದರೆ ಇನ್ನೂ ಶೇ.10ರಷ್ಟು ನೀರು ಉಳಿಸಬಹುದು ಎಂಬುದು ರೈತರ ಅಭಿಪ್ರಾಯವಾಗಿದೆ.

---

ವೀರೇಶ್ ಎ.ಎಂ., ಸಮುದಾಯ ಸಂಘಟಕರು,
ಸ್ಮೆಕ್ ಯೋಜನಾ ಸಹಾಯ ಸಂಸ್ಥೆ

‘ಮೊದಲು ವಾಟರ್ ಟ್ಯಾಕ್ಸ್ ಕೇಳಲು ಹೋದರೆ ಯಾರೂ ಕೊಡುತ್ತಿರಲಿಲ್ಲ. ಯಾಕೆಂದರೆ ನೀರು ಸರಿಯಾಗಿ ಬಿಡುತ್ತಿರಲಿಲ್ಲ. ಆದರೆ ಈಗ ಸಮಯಕ್ಕೆ ಸರಿಯಾಗಿ ನೀರು ಬಿಡುತ್ತಿದ್ದು ರೈತರೇ ವಾಟರ್ ಟ್ಯಾಕ್ಸ್ ಕೊಡಲು ಮುಂದೆ ಬಂದಿದ್ದಾರೆ. ಈಗಾಗಲೇ 11 ಸಾವಿರ ಮೊತ್ತ ಸಂಗ್ರಹವಾಗಿದೆ. ಕಾಲುವೆ ನಿರ್ವಹಣೆ ಯನ್ನೂ ಮುಂದೆ ನಾವೇ ಮಾಡುತ್ತೇವೆ. ಒಕ್ಕೂಟದಿಂದ ಕಾಲುವೆ ನಿರ್ವಹಣೆ ಕಿಟ್ ಮಂಜೂರಾಗಿದೆ. ನಮ್ಮ ಸಂಘಕ್ಕೆ ಒಬ್ಬೊಬ್ಬ ಚೌಡಿ ಕೊಡಬೇಕೆಂದು ಮನವಿ ಮಾಡಿದ್ದೇವೆ. ಅಲ್ಲದೆ ಮೀನುಗಾರಿಕೆ ಹಕ್ಕನ್ನೂ ನಮಗೇ ಕೊಡಬೇಕೆಂದು ಇಲಾಖೆಗೆ ಕೇಳಿದ್ದೇವೆ’.



ಚನ್ನಬಸಪ್ಪ, ಅಧ್ಯಕ್ಷರು,
ನೀರು ಬಳಕೆದಾರರ ಸಹಕಾರ ಸಂಘ, ನಾಗತಿಬೆಳಗಲು

---



‘ಗೊಂದಿ ಕಾಲುವೆಗೆ ಆದಷ್ಟೂ ಕೊನೆಯಲ್ಲಿದ್ದೇವೆ ನಾವು. ಮೊದಲು 15 ದಿವಸ ಆದರೂ ನೀರು ನೋಡಲು ಆಗುತ್ತಿರಲಿಲ್ಲ. ರಾತ್ರಿ ಹಗಲು ಓಡಾಡಿದರೂ ಜಮೀನಿಗೆ ನೀರು ಕೂಡಿಸಲು ಆಗ್ತಾ ಇರಲಿಲ್ಲ. ಅಲ್ಲದೆ ನೀರಿಗಾಗಿ ಜಗಳ ಆಡಿ 3–4 ಸಲ ಪೋಲೀಸ ಸ್ಟೇಷನ್‌ಗೆ ಹೋದ ಉದಾಹರಣೆಗಳೂ ಇವೆ. ಭಾಳಾ ನೋವು ಅನುಭವಿಸ್ತಾ ಇದ್ದೆವು. 4 ವರ್ಷ ಬರಗಾಲ ಆದಾಗ ನಮ್ಮ ಗದ್ದೆ ಕೆಳಗಿನ ಹಳ್ಳದಿಂದ ಡೀಸಲ್ ಮೋಟಾರ್ ಇಟ್ಟು 20–30 ಸಾವಿರ ಖರ್ಚು ಮಾಡಿ ಪೈಪ್‌ಲೈನ್ ಹಾಕಿ ನೀರು ತಂದಿದ್ದೆವು. ಒಂದು ಎಕರೆ ಹಾಯಿಸೋಕೆ 8 ದಿನ ಬೇಕಿತ್ತು. ಒಂದು ವರ್ಷ ಹಳ್ಳದಲ್ಲೂ ನೀರಿಲ್ಲದೆ ಬೆಳೆ ಒಣಗೇ ಹೋಗಿತ್ತು. 2–3 ಲಕ್ಷ ಖರ್ಚು ಮಾಡಿ ಬೋರ್‌ವೆಲ್ ಹಾಕಿಸಿದ್ದೆ. ಆದ್ರೆ ಈಗ ಒಂದು ವರ್ಷದಿಂದ ಯಾವುದೇ ತೊಂದ್ರೆ ಇಲ್ಲ. ಸಿಮೆಂಟ್ ಕಾಲುವೆ ಆಗಿದೆ. ಚಾನಲ್‌ಗೆ ನೀರು ಬಿಟ್ಟ ತಕ್ಷಣ ನಮ್ಮ ಗದ್ದೆಗೆ ಬರುತ್ತೆ.’.

ಎಸ್.ಎನ್. ರವಿಕುಮಾರ್, ರೈತರು, ಹೊಸಳ್ಳಿ

---



ನನಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಒಬ್ಬಳಿಗೆ ಮದುವೆ ಮಾಡಿದ್ದೀನಿ, ಇನ್ನೊಬ್ಬಳು ಓದ್ತಾ ಇದ್ದಾಳೆ. ಗೊಂದಿ ಕಾಲುವೆ ರಿಪೇರಿ ಅಗೋದಕ್ಕಿಂತ ಮುಂಚೆ ಒಂದು ವರ್ಷ ನೀರಿಲ್ಲದೆ ನಾವು ಬೇಸಾಯ ಮಾಡಲೇ ಇಲ್ಲ. ಹೊಲ ಎಲ್ಲಾ ಬೀಳು ಬಿಟ್ಟಿದ್ದೆವು. ಇನ್ನು ಕೆಲವು ವರ್ಷ ನೀರು ಜಾಸ್ತಿ ಬಂದು ಗದ್ದೆ ಮೇಲೆಲ್ಲಾ ನುಗ್ಗುತ್ತಿತ್ತು. ಕಾನಿ ಎಲ್ಲಾ ಮುಚ್ಚಿಕೊಳ್ಳುತ್ತಿದ್ದವು. ಕೂಲಿ ಕೊಟ್ಟು ಅಚ್ಚುಕಟ್ಟು ಮಾಡಿಸಬೇಕಿತ್ತು. ಈಗ ಆ ಸಮಸ್ಯೆ ಇಲ್ಲ.

ಗಾಯತ್ರಮ್ಮ, ನಿರ್ದೇಶಕರು ಮತ್ತು ರೈತ ಮಹಿಳೆ, ಹೊಸಳ್ಳಿ

ಬದಲಾವ

# ನಾಗತಿಬೆಳಗಲು ಅಚ್ಚು
# ನಡೆದು ಬ

ನಾಗತಿಬೆಳಗಲು ನೀರು ಬಳಕೆದಾ
ಕಾಮಗಾರಿಗಳು ಚಾಲ್ತಿಯಲ್ಲಿವೆ. ಈ ಬಗ್ಗೆ
ರೈತರ ಅನಿಸಿಕೆ, ಅಭಿಪ್ರಾಯಗಳನ್ನು ಇ



ಕಾಲುವೆ ಸ್ವಚ್ಛತೆಗೆ ಶ್ರಮದಾನ



ಜಾನುವಾರು ಮೈತೊಳೆಯುವುದು ಈಗ ಸುಲಭ



‘ಪ್ರತಿ ತಿಂಗಳೂ ಸಭೆ
ಮಾಡ್ತೀವಿ. ಗುಣಮಟ್ಟ
ಜವಾಬ್ದಾರಿ ವಹಿಸಿದ್ದೇವೆ.
ಗುಣಮಟ್ಟ ನಿಯಂತ್ರಣದ
ಕಬ್ಬಿಣ, ಆಳುಗಳ ಲೆಕ್ಕ ಇ
ಅನೇಕ ವಿಚಾರಗಳ ಬಗ್ಗೆ ಸ

ನಂಜುಂಡಪ್ಪ

# ಕಟ್ಟು ಕಾಮಗಾರಿಗಳು
# ಂದ ದಾರಿ

ರ ಸಹಕಾರ ಸಂಘದಿಂದ ಹಲವು
ಅಲ್ಲಿನ ವಿವಿಧ ಪದಾಧಿಕಾರಿಗಳ ಮತ್ತು
ಲ್ಲಿನ ಚಿತ್ರ ಸಂಪುಟದಲ್ಲಿ ನೀಡಲಾಗಿದೆ.



ಪದಾಧಿಕಾರಿಗಳ ಸಭೆ



ಬಟ್ಟೆ ಒಗೆಯುವ ಸೋಪಾನ

ಮಾಡ್ತಾ ಇದೀವಿ. ಕಾಮಗಾರಿ ಬಗ್ಗೆ ಚರ್ಚೆ ನೋಡ್ತೀವಿ. ಎಲ್ಲಾ ನಿರ್ದೇಶಕರಿಗೂ ಸಹ ಸಾಕಷ್ಟು ತರಬೇತಿ ಕೊಟ್ಟಿದ್ದಾರೆ. ಕಾಮಗಾರಿ ಬಗ್ಗೆ ಹೇಳಿದ್ದಾರೆ. ಎಂ. ಸ್ಯಾಂಡ್, ಸಿಮೆಂಟ್, ವುದು, ಆಡಿಟಿಂಗ್ ಮಾಡಿಸುವ ಬಗ್ಗೆ ಇತ್ಯಾದಿ ್ ಸಂಸ್ಥೆಯವರು ತರಬೇತಿ ಕೊಟ್ಟಿದ್ದಾರೆ'.

ಕಾರ್ಯದರ್ಶಿ. ನಾಗತಿಬೆಳಗಲು ನೀ.ಬ.ಸ.ಸಂ.



'ಮೊದ್ಲು ಚರಟ ಎಲ್ಲಾ ಬೆಳೆದು ಸಮಸ್ಯೆ ಆಗಿತ್ತು, ಈಗ ಸಿಮೆಂಟ್ ಕಾಲುವೆ ಆದ ಮೇಲೆ ಚೆನ್ನಾಗಿದೆ. ನಮಗೆ 1 ಎಕರೆ ಜಮೀನಿದೆ, ಅಡಿಕೆ ಬೆಳಿತೀವಿ, ಮೊದಲು ನೀರಿನ ಸಮಸ್ಯೆ ಆಗೋದು. ಕಾಲುವೆ ಕಸ-ಕಡ್ಡಿ ತುಂಬ್ಕೊಂಡು ಬಿದ್ದೋಗದು, ಮಣ್ಣೆಲ್ಲಾ ಎತ್ತಿಸೋಕೆ 3–4 ಸಾವಿರ ಲೇಬರ್ ಖರ್ಚು ತುಂಬಾ ಬರ್ತಿತ್ತು. ಒಂದು ಸಲ ಕಾಲುವೆ ಕ್ಲೀನ್ ಮಾಡಿಸೋಕೆ 4–5 ಆಳು ಬೇಕಿತ್ತು, ಈಗ ಅದ್ಯಾವುದೂ ಇಲ್ಲ'.

**ಲೀಲಾವತಿ, ರೈತ ಮಹಿಳೆ, ನಾಗತಿಬೆಳಗಲು ತಾಂಡ್ಯ**

---



'ಮೊದ್ಲು ನೀರು ಸರೀಗ್ ಬರ್ತಾ ಇರ್ಲಿಲ್ಲ, ಅದಕ್ಕೆ ನಾವು ವಾಟರ್ ಟ್ಯಾಕ್ಸ್ ಕಟ್ತಾ ಇರ್ಲಿಲ್ಲ. ಈಗ ನೀರು ಬರ್ತಾ ಇದೆ, ಇನ್ನು ಮುಂದೆ ವಾಟರ್ ಟ್ಯಾಕ್ಸ್ ಕಟ್ತೀವಿ'.

**ನಿಂಗರಾಜು, ರೈತರು, ಹೊಸಳ್ಳಿ**

---



'ಮೊದಲು ಮಣ್ಣಿನ ಕಾಲುವೆ ಇತ್ತು. ನೀರು ಸರಿಯಾಗಿ ಬರ್ತಾ ಇರಲಿಲ್ಲ. ವರ್ಷಕ್ಕೆ 2 ಸಲ ಸೋಸಬೇಕಿತ್ತು. ಬೆಳೆ ಬೆಳೆಯಲು ಆಗ್ತಾ ಇರಲಿಲ್ಲ. ಈ ಕಾಲುವೆಗೆ ಸುಮಾರು 300 ಎಕರೆ ಅಚ್ಚುಕಟ್ಟು ಬರುತ್ತೆ. ಆದರೆ ಎಲ್ಲಾ ಕಡೆಗೂ ನೀರ್ ತಲುಪ್ತಾ ಇರಲಿಲ್ಲ. ತುಂಬಾ ತೊಂದರೆ ಆಗೋದು. ಈಗ ಸಿಮೆಂಟ್ ಮಾಡಿದ ಮೇಲೆ ನೀರು ಬೇಗ ಬರುತ್ತೆ, ನೀರು ಉಳಿತಾಯ ಆಗ್ತಾ ಇದೆ. ಎಲ್ಲರಿಗೂ ನೀರು ಸಿಗುತ್ತಿದೆ'.

**ವೆಂಕಟಕೃಷ್ಣಯ್ಯ, ರೈತರು, ನಾಗತಿಬೆಳಗಲು ತಾಂಡ್ಯ**

---



'60–70 ವರ್ಷದ ಹಿಂದೆ ಸಿಮೆಂಟ್ ಕಾಲುವೆ ಇರಲಿಲ್ಲ. ನಾವೇ ತೆಗೀತಾ ಇದ್ವಿ, ನೀರು ವೇಸ್ಟ್ ಆಗ್ತಾ ಇತ್ತು. ಈಗ ಸಿಮೆಂಟ್ ಕಾಲುವೆ ಆದ ಮೇಲೆ ಒಳ್ಳೇದಾಗಿದೆ. ಯಾರು ನೀರು ಬಿಟ್ಟುಕೊಳ್ಳುತ್ತಾರೋ ಅವರಿಗಷ್ಟೇ ಹೋಗುತ್ತೆ'.

**ತಿಮ್ಮಪ್ಪ, ಅಂದಾಜು 80 ವರ್ಷ, ರೈತರು, ನಾಗತಿಬೆಳಗಲು ತಾಂಡ್ಯ**

---



'ಮೊದಲು ದನ-ಕರು ಮೈತೊಳೆಯಲು ಭಾಳಾ ಸಮಸ್ಯೆ ಆಗ್ತಾ ಇತ್ತು. ಎತ್ತುಗಳು ಇಳಿಯಲು ಆಗ್ತಾ ಇರಲಿಲ್ಲ. ಬಕೆಟ್ ನಲ್ಲಿ ತಂದು ಮೈ ತೊಳೆಯಬೇಕಿತ್ತು. ಈಗ ಸೋಪಾನ ಮಾಡಿರೋದರಿಂದ ಅನುಕೂಲ ಆಗಿದೆ. ದನಗಳು ಸಲೀಸಾಗಿ ಇಳಿಯುತ್ತವೆ'.

**ಎನ್. ಮಂಜುನಾಥ್, ರೈತರು, ನಾಗತಿಬೆಳಗಲು**



## ಆಂಧ್ರಪ್ರದೇಶ ತಂಡದ ಭೇಟಿ

ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯಿಂದ ವಿಶ್ವಬ್ಯಾಂಕ್ ಪ್ರಾಯೋಜಿತ ನೀರಾವರಿ ಸುಧಾರಣೆ ಯೋಜನೆಯ ತಂಡದ 40 ಜನ ಗೊಂದಿ ಆಧುನೀಕರಣ ಯೋಜನೆ ವೀಕ್ಷಣೆಗೆ ಆಗಮಿಸಿದ್ದರು. ತಂಡದಲ್ಲಿ ನಾಗಾರ್ಜುನ ಸಾಗರ ಕಾಲುವೆ ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರು, ರೈತರು ಮತ್ತು ನೀರಾವರಿ ಇಲಾಖೆಯ ಇಂಜಿನಿಯರುಗಳು ಇದ್ದರು. ಈ ತಂಡಕ್ಕೆ ಸ್ಮೆಕ್ ತಂಡದ ಉಪನಾಯಕರಾದ ಡಾ. ಶ್ರೀನಿವಾಸ್ ಮುದ್ರಕರ್ತ ಮತ್ತು ಭದ್ರಾ ಕಾಡಾದ ಪ್ರಭಾರ ಕಾರ್ಯಪಾಲಕ ಇಂಜಿನಿಯರ್ ಶ್ರೀ ಹರೀಶ್ ಅವರು ಗೊಂದಿ ಆಧುನೀಕರಣ ಯೋಜನೆಯ ಹಲವು ಆಯಾಮಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಂಡರು. ಚರ್ಚೆಯ ನಂತರ ಮುಖ್ಯ ಕಾಲುವೆ, ಹೊಲಗಾಲುವೆ ಹಾಗೂ ಇತರ ಕಾಮಗಾರಿಗಳನ್ನು ವೀಕ್ಷಿಸಲಾಯಿತು. ಜೊತೆಗೆ ಗೊಂದಿ ನೀರು ಬಳಕೆದಾರರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರೊಂದಿಗೆ ಹಲವು ವಿಷಯಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಿದರು.

## ಅಡಿಕೆ ಬೆಳೆಯ ರೋಗ ಮತ್ತು ಕೀಟ ನಿರ್ವಹಣೆ ತರಬೇತಿ

ಯೋಜನಾ ವ್ಯಾಪ್ತಿಯಲ್ಲಿ ಅಡಿಕೆ ಮುಖ್ಯ ಬೆಳೆ. ಇದಕ್ಕೆ ಬರುವ ರೋಗ ಮತ್ತು ಕೀಟಗಳ ಹತೋಟಿಗಾಗಿ ರೈತರಿಗೆ ಹಲವು ರೀತಿಯಲ್ಲಿ ಮಾಹಿತಿ ಒದಗಿಸಲಾಗುತ್ತಿದೆ. ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯದ ಪ್ರೊಫೆಸರ್ ನಾರಾಯಣಸ್ವಾಮಿ, ಡಾ. ನಂದಿನಿ, ಡಾ. ನಯನ ಮುಂತಾದ ಹಲವು ತಜ್ಞರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದಾರೆ. ಎಲ್ಲಾ ನೀರು ಬಳಕೆದಾರರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿಯೂ ಸಹ ಈ ರೀತಿಯ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.



ದಿನಾಂಕ 06.07.2018ರಂದು ಸೀಗೆಬಾಗಿಯಲ್ಲಿ ನಡೆದ ತರಬೇತಿ

# ಯಶಸ್ವಿ ಸಾಧನೆಯತ್ತ
# ಕೊಪ್ಪ ದೊಡ್ಡಕೆರೆ ನೀರು ಬಳಕೆದಾರರ ಸಹಕಾರ ಸಂಘ

ಕೊಪ್ಪದೊಡ್ಡಕೆರೆ ನೀರು ಬಳಕೆದಾರರ ಸಹಕಾರ ಸಂಘವು 02.12.2002 ರಂದು ನೊಂದಣಿಯಾಯಿತು. (ಸಂಖ್ಯೆ ಭದ್ರಾ ಕಾಡಾ ಎಆರ್./ಭದ್ರಾ ಕಾಡಾ/ ಆರ್‌ಜಿಎನ್/30656). ಕೊಪ್ಪದೊಡ್ಡಕೆರೆಯು ಜೀವನಕ್ಕೆ ಆಧಾರವಾಗಿರುವುದರಿಂದ ಗ್ರಾಮದ ಹಿರಿಯರೆಲ್ಲ ಸೇರಿ ಕೆರೆಯ ಸಮಗ್ರ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂಬ ದೃಷ್ಟಿಕೋನದಿಂದ ಈ ಸಂಘವನ್ನು ಪ್ರಾರಂಭಿಸಲಾಯಿತು. ಸಂಘದ ವ್ಯಾಪ್ತಿಯಲ್ಲಿ 7 ಗ್ರಾಮಗಳಿದ್ದು, 598.47 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ಸಂಘವು 02.12.2002 ರಂದು ಕರ್ನಾಟಕ ನೀರಾವರಿ ನಿಗಮದೊಂದಿಗೆ ನೀರು ನಿರ್ವಹಣೆಯ ಒಪ್ಪಂದವನ್ನು ಮಾಡಿಕೊಂಡಿದೆ.

## ಸದಸ್ಯತ್ವ ಶುಲ್ಕ ಮತ್ತು ವಂತಿಕೆ ಹಣ ವಸೂಲಿ ಪ್ರಕ್ರಿಯೆ

ಗ್ರಾಮದ ಮುಖಂಡರುಗಳು ಅಚ್ಚುಕಟ್ಟುದಾರರ ಮನವೊಲಿಸಿ ಕೆರೆ ಅಭಿವೃದ್ಧಿ ಮಾಡಿಕೊಳ್ಳುವುದರಿಂದ ಯಾವ ರೀತಿ ರೈತರಿಗೆ ಅನುಕೂಲವಾಗುತ್ತದೆ ಮತ್ತು ಕೆರೆಯ ಅಭಿವೃದ್ದಿಗೆ ಸರ್ಕಾರದಿಂದ ಹಣಕಾಸು ದೊರೆಯಬಹುದೆಂಬ ಉದ್ದೇಶದಿಂದ ಸದಸ್ಯತ್ವ ಶುಲ್ಕ ಮತ್ತು ವಂತಿಕೆಯನ್ನು ವಸೂಲಿ ಮಾಡಲಾಯಿತು. ಒಟ್ಟು 620 ಜನ ಅಚ್ಚುಕಟ್ಟು ದಾರರಿದ್ದು ಅದರಲ್ಲಿ ಇದುವರೆಗೂ 341 ರೈತರು ಸಂಘದ ಸದಸ್ಯರಾಗಿದ್ದಾರೆ. ಈ ಸದಸ್ಯರಿಂದ ರೂ. 35000 ಶುಲ್ಕ ವಸೂಲಾಗಿದೆ. ಭದ್ರಾ ಕಾಡಾದಿಂದ ರೂ. 2,64,924 ವಂತಿಕೆ ಹಣವನ್ನು ಪಡೆಯಲಾಗಿದೆ.



## ಸಂಘಕ್ಕೆ ಸ್ವಂತ ಕಟ್ಟಡ ಕಟ್ಟಲು ಜಾಗ ಖರೀದಿ ಪ್ರಕ್ರಿಯೆ

ಪ್ರತಿ ವರ್ಷ ಸಂಘದ ಸದಸ್ಯರು ಮೀನುಗಾರಿಕೆ ಇಲಾಖೆಯೊಂದಿಗೆ ಕೆರೆಯಲ್ಲಿ ಮೀನುಗಾರಿಕೆ ಮಾಡುವ ಪ್ರಕ್ರಿಯೆ ಬಗ್ಗೆ ತಿಳಿದುಕೊಳ್ಳುತ್ತಾ ಇದ್ದೇವೆ, 2009 ಇಸವಿಯಲ್ಲಿ ಮೀನುಗಾರಿಕೆ ಅವಧಿ ಮುಗಿದರು ಸಹ ಮೀನು ಹಿಡಿಯುತ್ತಾ ಇದ್ದ ಗುತ್ತಿಗೆದಾರರ ಕಾರ್ಯವನ್ನು ನಿಲ್ಲಿಸಿ ಸಂಘದವರೆ ಒಟ್ಟುಗೂಡಿ ಮೀನು ಹಿಡಿದು ಮಾರಿ ಅದರಿಂದ ಬಂದಂತಹ ಹಣದಿಂದ ಸ್ಥಳಿಯ ಗ್ರಾಮಪಂಚಾಯಿತಿ ಸದಸ್ಯ ರನ್ನು ಮನವೊಲಿಸಿ ನಮ್ಮ ಸಂಘವು ರೈತರ ಅಭಿವೃದ್ಧಿಗಾಗಿ ಇರುವುದರಿಂದ ನಮಗೆ ಸ್ವಂತ ಕಟ್ಟಡ ಕಟ್ಟಲು ನಿವೇಶನ ಬೇಕೆಂದು ಮನವಿ ಮಾಡಿದಾಗ ಗ್ರಾಮಪಂಚಾಯಿತಿ ಯವರು ಒಪ್ಪಿ 15*30 ಅಡಿ ಅಳತೆಯ 5000 ರೂ.ಗಳನ್ನು ಸರ್ಕಾರಕ್ಕೆ ಹಣ ಪಾವತಿಸಿ ನಿವೇಶವನ್ನು ಮಂಜೂರು ಮಾಡಿಸಿಕೊಳ್ಳಲಾಯಿತು.

## ನೀರಿಗಾಗಿ ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿರುವುದು

ಅಚ್ಚುಕಟ್ಟು ಪ್ರದೇಶದ ಬೆಳೆಗಳಿಗೆ ನೀರು ಪಡೆಯಲು ಮೀನುಗಾರಿಕೆ ಹಕ್ಕನ್ನು ಪಡೆದುಕೊಂಡಿದ್ದ ಗುತ್ತಿಗೆದಾರರೊಂದಿಗೆ ನಮ್ಮ ಸಂಘದ ಸದಸ್ಯರುಗಳು ಮತ್ತು ರೈತರು ಪ್ರತಿ ವರ್ಷ ಜಳವಾಡುತ್ತಿದ್ದೆವು, ಯಾಕೆಂದರೆ ಪ್ರತಿ ಬೇಸಿಗೆ ಬೆಳೆಗೆ ನೀರಿನ ಕೊರತೆ ಉಂಟಾಗುತ್ತಿತ್ತು. ನಾವುಗಳು ಅವಶ್ಯಕತೆಗೆ ಅನುಗುಣವಾಗಿ ಮತ್ತು ಜವಾಬ್ದಾರಿಯುತವಾತ ನೀರನ್ನು ಬಳಸುತ್ತಿದ್ದೆವು. ಆದರೆ ಮೀನುಗಾರಿಕೆ ಗುತ್ತಿಗೆದಾರರು ರಾತ್ರಿ ಸಮಯದಲ್ಲಿ ನಮಗೆ ಗೊತ್ತಾಗದೆ ತೂಬನ್ನು ತೆಗೆದು ನೀರನ್ನು ದುರುಪಯೋಗ ಮಾಡುತ್ತಿದ್ದರು. ಯಾಕೆಂದರೆ ಅವರಿಗೆ ಕೆರೆಯಲ್ಲಿ ಕಡಿಮೆ ನೀರು ಇದ್ದರೆ ಹೆಚ್ಚು ಮೀನುಗಳು ಸಿಗುತ್ತದೆ ಎಂಬ ಅಭಿಪ್ರಾಯವಿತ್ತು. ನಮಗೆ ಇದರಿಂದ ನೀರಿನ ಕೊರತೆ ಹೆಚ್ಚಾಗುತ್ತಿತ್ತು ಮತ್ತು ನೀರನ್ನು ತಡೆಯುವ ಸಂಧರ್ಭದಲ್ಲಿ ಜಗಳಗಳು ಆಗುತ್ತಿದ್ದವು. ಇದರಿಂದ 2 ಸಾರಿ ಹೊಡೆದಾಡಿ ಪೋಲಿಸ್ ಸ್ಟೇಷನ್‌ಗೂ ಸಹ ಹೋಗಿದ್ದೆವು.

## ಭದ್ರಾ ಕಾಡಾದಲ್ಲಿ ಕಾಮಗಾರಿ ಪಡೆದ ಬಗ್ಗೆ

ಸಂಘದ ವ್ಯಾಪ್ತಿಗೆ ಸೇವಾ ರಸ್ತೆ ಅವಶ್ಯಕತೆ ಇದ್ದುದ್ದರಿಂದ ಭದ್ರಾಕಾಡಾ ಅಧಿಕಾರಿಗಳಿಗೆ ಈ ಬಗ್ಗೆ ಮನವಿ ಸಲ್ಲಿಸಲಾಯಿತು. ಮನವಿಗೆ ಸ್ಪಂದಿಸಿ 5 ಲಕ್ಷ ರೂ. ಕಾಮಗಾರಿಯನ್ನು ಮಂಜೂರು ಮಾಡಿದರು. ಇದರಿಂದ ಉತ್ತಮವಾಗಿ ರಸ್ತೆ ಅಭಿವೃದ್ಧಿಪಡಿಸ ಲಾಯಿತು. ಅಲ್ಲದೆ ನೀರಾವರಿ ಇಲಾಖೆಯೊಂದಿಗೆ ಮಾತನಾಡಿ, ಸ್ಥಳೀಯ ಮುಖಂಡರ ಸಹಾಯ ದಿಂದ 2 ಸಾರಿ ನಮ್ಮ ಕೆರೆಯ ತೂಬು ಗಳನ್ನು ನಿಂತು ಉಸ್ತುವಾರಿ ಮತ್ತು ನಿರ್ವಹಣೆ ಮಾಡಿಕೊಳ್ಳಲಾಯಿತು.



ವ್ಯವಸಾಯ ಸೇವಾ ಸಹಕಾರ ಬ್ಯಾಂಕಿಗೆ ಮನವಿ ಪತ್ರ ಸಲ್ಲಿಕೆ

### ಸಂಘದ ವ್ಯಾಪ್ತಿಗೆ ಹೆಚ್ಚು ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯನ್ನು ಪಡೆದುಕೊಂಡ ಬಗ್ಗೆ

ನಮ್ಮ ಸಂಘದ ವ್ಯಾಪ್ತಿಗೆ ಬರುವ ಸುತ್ತ–ಮುತ್ತಲ 5 ಗ್ರಾಮಗಳ 326.47 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಆರಂಭದ ಕ್ರಿಯಾ ಯೋಜನೆಯಲ್ಲಿ ಬಿಟ್ಟು ಹೋಗಿತ್ತು. ಸಂಘದ ಕಾರ್ಯಕಾರಿ ಸಮಿತಿ ಸಭೆ ನಡೆಸಿ ಇದನ್ನು ಸಂಘದ ವ್ಯಾಪ್ತಿಗೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಪ್ರಸ್ತುತ ಇದರ ಅಭಿವೃದ್ಧಿ ಮತ್ತು ನಿರ್ವಹಣೆ ನಡೆಯುತ್ತಿದೆ.

### ಕೊಪ್ಪ ದೊಡ್ಡಕೆರೆ ಅಂಗಳದ ಒತ್ತುವರಿ ತೆರವುಗೊಳಿಸಲು ಪ್ರಯತ್ನ

ನಮ್ಮ ಸಂಘದ ಕೆರೆ ಅಂಗಳವು ಅಂದಾಜು 125 ಎಕರೆಯಷ್ಟು ಒತ್ತುವರಿಯಾಗಿದ್ದು, ಇದನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳಿಗೆ ಮತ್ತು ತಹಶೀಲ್ದಾರರಿಗೆ ಮನವಿ ಪತ್ರ ನೀಡಿ ತೆರವುಗೊಳಿಸಲು ಪ್ರಯತ್ನಿಸಲಾಗುತ್ತಿದೆ.

### ಸಂಘಕ್ಕೆ ಸದಸ್ಯರಾಗಲು ಅರ್ಜಿ ನಮೂನೆ ಮಾದರಿ ತಯಾರಿ

ಸಂಘಕ್ಕೆ ಹೊಸ ಸದಸ್ಯರಾಗಲು ನೂತನ ಅರ್ಜಿ ನಮೂನೆ ತಯಾರಿಸಿದ ಹೆಗ್ಗಳಿಕೆ ಈ ಸಂಘದ್ದಾಗಿದೆ. ಪ್ರತಿ ಸದಸ್ಯರಿಂದ ಪಹಣಿ, ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, 2 ಫೋಟೊ ಪಡೆದು ಸಂಘದ ಗುರುತಿನ ಚೀಟಿ ನೀಡಲು ತೀರ್ಮಾನಿಸಲಾಗಿದೆ.

### ಸಂಪನ್ಮೂಲ ಕ್ರೋಢೀಕರಣ

ಸಂಘವು ವ್ಯವಸ್ಥಿತವಾಗಿ ಮುನ್ನಡೆಯಲು ಮತ್ತು ಅಚ್ಚುಕಟ್ಟು ಪ್ರದೇಶದ ಕಾಲುವೆಗಳ ಉಸ್ತುವಾರಿ ಮತ್ತು ನಿರ್ವಹಣೆ ಮಾಡಲು ಹಣಕಾಸು ಅವಶ್ಯಕವಾಗಿರುತ್ತದೆ. ಆದ್ದರಿಂದ ನೀರಿನ ಶುಲ್ಕ ವಸೂಲು ಮಾಡಲು ತೀರ್ಮಾನಿಸಿ ಈಗಾಗಲೆ 6 ಜನ ರೈತರಿಂದ ರೂ. 2818 ಶುಲ್ಕವನ್ನು ವಸೂಲು ಮಾಡಲಾಗಿದೆ ಮತ್ತು ಈ ಪ್ರಯತ್ನವು ಮುಂದುವರಿದಿದೆ. ನೀರಿನ ಶುಲ್ಕ ವಸೂಲಿ ಮಾಡುವ ಅಧಿಕಾರವು ನಮ್ಮ ಸಂಘಕ್ಕೆ ಇದೆ ಎಂದು ತಿಳಿಸಲು ಹೊಳೆಹೊನ್ನೂರು ವ್ಯವ ಸಾಯ ಸೇವಾ ಸಹಕಾರ ಬ್ಯಾಂಕ್ ಅಧ್ಯಕ್ಷರಿಗೆ ಮತ್ತು ಕಾರ್ಯದರ್ಶಿಗೆ ಮನವಿ ಪತ್ರ ನೀಡಿ ಸಹಕಾರ ಕೋರಲಾಗಿದೆ.

### ಮೀನುಗಾರಿಕೆ ಹಕ್ಕು ಪಡೆಯಲು ಪ್ರಯತ್ನ

ಕೊಪ್ಪದೊಡ್ಡಕೆರೆಯಲ್ಲಿ ಮೀನುಗಾರಿಕೆ ಹಕ್ಕನ್ನು ಪಡೆಯಲು ಸತತ ಪ್ರಯತ್ನ ನಡೆಯುತ್ತಿದೆ. ತಾಲ್ಲೂಕು, ಜಿಲ್ಲಾ ಹಾಗೂ ಉಚ್ಚನ್ಯಾಯಾಲಯದವರೆಗೂ ಹೋಗಿ ಹೋರಾಟ ಮಾಡಿದರೂ ಸಹ ನಮ್ಮ ಸಂಘಕ್ಕೆ ಮೀನುಗಾರಿಕೆ ಹಕ್ಕು ಪಡೆಯಲು ಸಾಧ್ಯವಾಗಿಲ್ಲ. ಪ್ರಸ್ತುತ ಗೊಂದಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಘಗಳು ಒಟ್ಟುಗೂಡಿ 8 ಕೆರೆಗಳಲ್ಲಿ ನಮ್ಮ ಸಂಘಗಳಿಗೆ ಮೀನುಗಾರಿಕೆ ಹಕ್ಕು ಪಡೆಯಲು ಪ್ರಯತ್ನಿಸುತ್ತಾ ಇದ್ದೇವೆ.

### ಕಾರ್ಯಕಾರಿ ಸಮಿತಿ ಸಭೆ ಮತ್ತು ವಾರ್ಷಿಕ ಮಹಾಸಭೆ

ಸಂಘದ ಕಾರ್ಯಕಾರಿ ಸಮಿತಿ ಸಭೆಯನ್ನು ಪ್ರತಿ ತಿಂಗಳು ತಪ್ಪದೆ ನಡೆಸುತ್ತಾ ಬರಲಾಗುತ್ತಿದೆ. ಅವಶ್ಯಕತೆ ಇದ್ದಲ್ಲಿ ವಿಶೇಷ ಸಭೆಗಳನ್ನು ಸಹ ಮಾಡಲಾಗುತ್ತಿದೆ. ಪ್ರತಿ ವರ್ಷ ತಪ್ಪದೇ ಲೆಕ್ಕ ಪರಿಶೋಧನಾ ವರದಿ ತಯಾರಿಸಿ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರ ಮುಂದೆ ಮಂಡನೆ ಮಾಡಲಾಗುತ್ತಿದೆ.

### ಗೊಂದಿ ಆಧುನೀಕರಣ ಯೋಜನೆಯಲ್ಲಿ ಪಾಲ್ಗೊಳ್ಳುವಿಕೆ

ಈ ಯೋಜನೆಯಲ್ಲಿ ಸಂಘಕ್ಕೆ 26 ಪ್ಯಾಕೇಜ್‌ಗಳ ಅಚ್ಚುಕಟ್ಟು ಕಾಮಗಾರಿ ಮಾಡಲು ರೂ. 50024891.6 ನೆರವು ದೊರೆತಿದೆ. ಕಾಮಗಾರಿ ಪ್ರಾರಂಭಿಸುವ ಮೊದಲು ಸಂಘದ ಸದಸ್ಯರು ಭದ್ರಾ ಕಾಡಾದ ಅಧಿಕಾರಿಗಳೊಂದಿಗೆ ಪ್ರತಿ ಅಚ್ಚುಕಟ್ಟು ಕಾಲುವೆಗಳ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಅಲ್ಲದೆ ಕಾಮಗಾರಿಗಳ ಅನುಷ್ಠಾನ ಹಂತ ಮತ್ತು ಉಸ್ತುವಾರಿ ನಿರ್ವಹಣೆ ಮಾಡಲು ಗ್ರಾಮವಾರು ಕಾಮಗಾರಿ ನಿರ್ವಹಣೆ ಉಪ ಸಮಿತಿ ಮತ್ತು ಮಹಿಳಾ ಉಪ ಸಮಿತಿ ರಚನೆ ಮಾಡಿದ್ದು, ಆಯಾ ಭಾಗದ ರೈತರೇ ಖುದ್ದಾಗಿ ನಿಂತು ಕಾಮಗಾರಿಗಳ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಜೊತೆಗೆ ಸ್ಥಳೀಯ ಸಮಸ್ಯಗಳನ್ನು ಸ್ವತ: ತಾವೇ ಬಗೆ ಹರಿಸಿಕೊಳ್ಳುತ್ತಾ ಯಶಸ್ವಿ ಸಾಧನೆ ಯತ್ತ ಕೊಂಡೊಯ್ಯುತ್ತಿದ್ದಾರೆ.

---

ರವಿ ಎಂ., ಕಾರ್ಯದರ್ಶಿ,
ಕೊಪ್ಪದೊಡ್ಡಕೆರೆ ನೀರು ಬಳಕೆದಾರರ ಸಹಕಾರ ಸಂಘ

# ಸಾವಯವ ಕೃಷಿ ಕ್ಷೇತ್ರಗಳನ್ನು ಪ್ರಮಾಣೀಕರಿಸಲು ಅನುಸರಿಸಬೇಕಾದ ಕ್ರಮಗಳು

ಸಾವಯವ ಭೂಪರಿವರ್ತನೆ: ಸಾಂದ್ರ ಬೇಸಾಯ ಪದ್ಧತಿಯಿಂದ ಸಾವಯವ ಬೇಸಾಯ ಪದ್ಧತಿಗೆ ಭೂಪರಿವರ್ತನೆಗೊಳ್ಳಲು ಬೇಕಾಗುವ ಸಮಯ. ವಾರ್ಷಿಕ ಬೆಳೆಗಳಿಗೆ : 2 ವರ್ಷಗಳು, ಬಹುವಾರ್ಷಿಕ ಬೆಳೆಗಳಿಗೆ : 3 ವರ್ಷಗಳು. ಭಾಗಶಃ ಭೂಪರಿವರ್ತನೆಗೆ ಒಳಪಡುವ ಕೃಷಿ ಕ್ಷೇತ್ರಗಳು ಹಾಗೂ ಶೇಖರಣ ಸ್ಥಳಗಳು ಪ್ರತ್ಯೇಕವಾಗಿದ್ದು, ಪರಿವೀಕ್ಷಣೆ ಮಾಡುವಂತಿರಬೇಕು

### ಬಿತ್ತನೆ ಬೀಜ/ಸಸ್ಯಾಭಿವೃದ್ಧಿ ಭಾಗಗಳು (Planting material)

ಸಾವಯವ ಕೃಷಿಯಲ್ಲಿ ಉಪಯೋಗಿಸುವ ಬಿತ್ತನೆ ಬೀಜ/ಸಸ್ಯಾಭಿವೃದ್ಧಿ ಭಾಗಗಳು ಪ್ರಮಾಣಿತ ಸಾವಯವ ಮೂಲದ್ದಾಗಿರಬೇಕು, ಇಲ್ಲವಾದಲ್ಲಿ ರಸಾಯನಿಕ ಅನುಪಚರಿತ ಬಿತ್ತನೆ ಬೀಜ/ಸಸ್ಯಾಭಿವೃದ್ಧಿ ಭಾಗಗಳನ್ನು ಬಳಸಬಹುದು.

### ಸಾವಯವ ಕೃಷಿಯಲ್ಲಿ ಬಳಸುವ ಗೊಬ್ಬರಗಳು ಮತ್ತು ಸಸ್ಯ ಸಂರಕ್ಷಣೆ

ಪ್ರಮಾಣಿತ ಸಾವಯವ ಮೂಲದ ಗೊಬ್ಬರಗಳು ಹಾಗೂ ಪೀಡೆನಾಶಕಗಳನ್ನು ಬಳಸಬೇಕು (ಆದಷ್ಟು ಕ್ಷೇತ್ರದಲ್ಲೇ ಉತ್ಪಾದಿಸಿ ಉಪಯೋಗಿಸಬೇಕು).

### ನೈಸರ್ಗಿಕ ತಡೆಗೋಡೆ (ಬಫರ್ ಜೋನ್)

ಸಿಂಪರಣೆ ಮಾಡಿದ ರಾಸಾಯನಿಕ ಕ್ಷೇತ್ರಗಳಿಂದ ಬರಬಹುದಾದಂತಹ ಕೀಟನಾಶಕಗಳ ಹರಡುವಿಕೆ (Drift)ಯನ್ನು ತಡೆಯಲು ಸಾವಯವ ಕೃಷಿ ಕ್ಷೇತ್ರದಲ್ಲಿ ನೈಸರ್ಗಿಕ ತಡೆಗೋಡೆಯನ್ನು (ಬಫರ್ ಜೋನ್) ನಿರ್ಮಿಸುವುದು. ಜೈವಿಕ ವೈವಿಧ್ಯತೆಯನ್ನು ಕಾಪಾಡಬೇಕು.

### ಕೃಷಿ ಉಪಕರಣಗಳು

ಪ್ರತ್ಯೇಕವಿರಬೇಕು ಇಲ್ಲವಾದಲ್ಲಿ ಸಾವಯವ ಕೃಷಿಯಲ್ಲಿ ಬಳಸುವ ಮುನ್ನ ಸ್ವಚ್ಛಗೊಳಿಸಿ ಉಪಯೋಗಿಸಬೇಕು.



### ಕ್ಷೇತ್ರ ಮಟ್ಟದಲ್ಲಿ ದಾಖಲಾತಿಗಳ ನಿರ್ವಹಣೆ

ಕ್ಷೇತ್ರ ದಿನಚರಿ (Farm Diary), ವಾರ್ಷಿಕ ಸಾವಯವ ಕ್ಷೇತ್ರ ನಿರ್ವಹಣಾ ಯೋಜನೆ (Annual Organic Farm Management Plan), ಖರೀದಿಸಿದ ದಾಖಲೆಗಳು, ಮಾರಾಟದ ದಾಖಲೆಗಳು, ಮಣ್ಣು ಮತ್ತು ನೀರಿನ ಪರೀಕ್ಷಾ ವರದಿಗಳು, ಸಾವಯವ ಕೃಷಿಯ ಬಗ್ಗೆ ತರಬೇತಿ ಪಡೆದ ಮಾಹಿತಿ.

### ಕೊಯ್ಲು

ಸಾವಯವ ಬೆಳೆಗಳ ಕೊಯ್ಲಿನಲ್ಲಿ ಹಾಗೂ ಕೊಯ್ಲೋತ್ತರ ಚಟುವಟಿಕೆಗಳಲ್ಲಿ ಬಳಸುವ ಉಪಕರಣಗಳು ರಾಸಾಯನಿಕ ಕಲುಷಿತ ಮುಕ್ತವಾಗಿರಬೇಕು.

### ಶೇಖರಣೆ ಮತ್ತು ಸಾಗಾಣಿಕೆ

ಸಾವಯವ ಕೃಷಿ ಉತ್ಪನ್ನಗಳನ್ನು ನಿರ್ಬಂದಿತ / ರಾಸಾಯನಿಕ ಕಲುಷಿತ ಮುಕ್ತವಾಗಿ ಶೇಖರಣೆ ಮತ್ತು ಸಾಗಾಣಿಕೆ ಮಾಡಬೇಕು.

## ಸಾವಯವ ಕೃಷಿ ಪ್ರಮಾಣೀಕರಣದಲ್ಲಿ ನಿಷೇಧಾತ್ಮಕ ಕ್ರಮಗಳು

### ಸಮಾನಾಂತರ ಬೆಳೆ (Parallel production)

ಸಾಂದ್ರ ಹಾಗೂ ಸಾವಯವ ಕೃಷಿ ಕ್ಷೇತ್ರಗಳಲ್ಲಿ ಒಂದೇ/ಏಕರೀತಿಯ ಬೆಳೆಗಳನ್ನು ಬೆಳೆಯಬಾರದು

### ಬಿತ್ತನೆ ಬೀಜ/ಸಸ್ಯಾಭಿವೃದ್ಧಿ ಭಾಗಗಳು

ರಾಸಾಯನಿಕವಾಗಿ ಉಪಚರಿಸಿದ ಬಿತ್ತನೆ ಬೀಜ/ಸಸ್ಯಾಭಿವೃದ್ಧಿ ಭಾಗಗಳನ್ನು ಉಪಯೋಗಿಸಬಾರದು. ಜೈವಿಕವಾಗಿ ಮಾರ್ಪಾಟುಗೊಂಡ (Genetically Modified Organism) ಬಿತ್ತನೆ ಬೀಜ ಮತ್ತು ಸಸ್ಯಾಭಿವೃದ್ಧಿ ಭಾಗಗಳನ್ನು ಉಪಯೋಗಿಸಬಾರದು.

ಸಾವಯವ ಕೃಷಿಯಲ್ಲಿ ರಸಾಯನಿಕ ಗೊಬ್ಬರ, ಪೀಡೆ ನಾಶಕಗಳು ಹಾಗೂ ಬೆಳೆವಣಿಗೆಯ ಹಾರ್ಮೋನ್‌ಗಳನ್ನು ಉಪಯೋಗಿಸಬಾರದು. ಸಾವಯವ ಕೃಷಿಯಿಂದ ಸಾಂದ್ರ ಕೃಷಿ ಪದ್ಧತಿಗೆ ಹಾಗೂ ಸಾಂದ್ರ ಕೃಷಿ ಪದ್ಧತಿಯಿಂದ ಸಾವಯವ ಕೃಷಿ ಪದ್ಧತಿಗೆ ಆಗಿಂದಾಗೆ ಬದಲಾವಣೆ ಮಾಡಬಾರದು. ಮನುಷ್ಯನ ಮಲ ಮೂತ್ರ: ಮನುಷ್ಯನ ಮಲ ಮೂತ್ರವನ್ನು ಸಾವಯವ ಕೃಷಿಯಲ್ಲಿ ಗೊಬ್ಬರವಾಗಿ ಬಳಸಬಾರದು.


( ಕೃಪೆ : ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ )

# ಭರದಿಂದ ನಡೆಯುತ್ತಿರುವ ಸಂಘದ ಕಟ್ಟಡ ಕಾಮಗಾರಿಗಳು


ಬಾರಂದೂರು

ಗೊಂದಿ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ಏಷಿಯನ್ ಡೆವಲಪ್ ಮೆಂಟ್ ಬ್ಯಾಂಕ್ ಅನುದಾನ ಒದಗಿಸಿದೆ. ಇದರ ಪ್ರಯೋಜನ ಪಡೆಯುತ್ತಿರುವ ಹಲವು ಸಂಘಗಳು ಈಗಾಗಲೇ ಕಟ್ಟಡ ನಿರ್ಮಾಣ ಆರಂಭಿಸಿವೆ. ಮುಖ್ಯವಾಗಿ ದಾಸರಕಲ್ಲಳ್ಳಿ, ತಳ್ಳಿಕಟ್ಟೆ, ಕಾಗೆಕೊಡಮಗ್ಗೆ ಹಾಗೂ ಬಾರಂದೂರು ಸಂಘಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಒಕ್ಕೂಟದ ಕಟ್ಟಡವೂ ಸಹ ನಿರ್ಮಾಣ ಹಂತದಲ್ಲಿದೆ. ವಿವರಗಳನ್ನು ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

| ಸಂಘದ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಪ್ರಗತಿ ವಿವರ |
|---|---|---|
| 1) ಬಾರಂದೂರು | 19.88 | ತಳಪಾಯ ಮುಗಿದಿದೆ |
| 2) ಸೀಗೆಬಾಗಿ | 0.00 | ನಿವೇಶನ ಹಸ್ತಾಂತರ ಪ್ರಗತಿಯಲ್ಲಿದೆ |
| 3) ಬಾಬಳ್ಳಿ | 0.00 | ಅಂದಾಜು ಮಂಜೂರಾತಿ ನಿರೀಕ್ಷೆಯಲ್ಲಿದೆ |
| 4) ಕಾಗೆಕೊಡಮಗ್ಗೆ | 13.85 | ಮುಕ್ತಾಯ ಹಂತ |
| 5) ತಳ್ಳಿಕಟ್ಟೆ | 7.24 | ಮೇಲ್ಛಾವಣಿ ಮುಗಿದಿದೆ |
| 6) ನಾಗತಿಬೆಳಗಲು | 18.80 | ತಳಪಾಯ ಮುಗಿದಿದೆ |
| 7) ದಾಸರಕಲ್ಲಳ್ಳಿ | 18.90 | ಮೊದಲನೇ ಮಹಡಿ ಪ್ರಗತಿಯಲ್ಲಿದೆ |
| 8) ಕೊಪ್ಪದೊಡ್ಡಕೆರೆ | 18.53 | ತಳಪಾಯ ಮುಗಿದಿದೆ |
| 9) ಹೊಳೆಹೊನ್ನೂರು | 17.65 | ತಳಪಾಯ ಪ್ರಗತಿಯಲ್ಲಿದೆ |
| 10) ಮೂಡಲವಿಠಲಾಪುರ | 18.64 | ತಳಪಾಯ ಮುಗಿದಿದೆ |
| 11) ನೀಬಸಸಂ ಒಕ್ಕೂಟ | 38.82 | ಮೇಲ್ಛಾವಣಿ ಮುಗಿದಿದ್ದು ಉಳಿಕೆ ಕಾಮಗಾರಿ ಪ್ರಗತಿಯಲ್ಲಿದೆ |


ದಾಸರಕಲ್ಲಳ್ಳಿ


'ಜಲಸಂಪದ' ಪತ್ರಿಕೆಯ ಓದಿನಲ್ಲಿ ತಲ್ಲೀನರಾಗಿರುವ ನಾಗತಿಬೆಳಗಲು ಗ್ರಾಮದ ರೈತರು ಮತ್ತು ನೀರು ಬಳಕೆದಾರ ಸಹಕಾರ ಸಂಘದ ಪದಾಧಿಕಾರಿಗಳು


## Main Canal & Distributary Physical Progress as of 30 September 2018

| Item of Work | Lining (Km.) | | Achievement % | Structures (Nos.) | | Achievement % |
|---|---|---|---|---|---|---|
| | Estimate | Achievement | | Estimate | Achievement | |
| 1) Left Bank Canal | 14.74 | 14.20 | 96 | 74 | 74 | 100 |
| 2) Right Bank Canal | 74.24 | 51.67 | 70 | 392 | 321 | 82 |
| 3) Distributary | 26.10 | 26.10 | 100 | 212 | 212 | 100 |

### Physical Progress : Lining




### Physical Progress : Structures




## CAD Physical Progress as of 30 September 2018

| Name of the WUCS | Lining (Km.) | | Achievement % | Structures (Nos.) | | Achievement % |
|---|---|---|---|---|---|---|
| | Estimate | Achievement | | Estimate | Achievement | |
| 1) Doddagoppenahalli | 10.77 | 6.20 | 58 | 147 | 38 | 26 |
| 2) Baranduru | 27.32 | 25.67 | 94 | 376 | 330 | 88 |
| 3) Seegebagi | 11.37 | 10.82 | 95 | 169 | 90 | 53 |
| 4) Baballi | 23.44 | 23.44 | 100 | 201 | 201 | 100 |
| 5) Kagekodamagge | 11.36 | 11.36 | 100 | 114 | 112 | 98 |
| 6) Tallikatte | 11.40 | 11.30 | 99 | 128 | 95 | 74 |
| 7) Nagatibelagalu | 15.16 | 12.48 | 82 | 231 | 115 | 50 |
| 8) Dasarakallahalli | 18.38 | 16.00 | 87 | 208 | 127 | 61 |
| 9) Koppadoddakere | 16.11 | 12.65 | 79 | 188 | 89 | 47 |
| 10) Holehonnuru | 11.25 | 8.85 | 79 | 107 | 66 | 62 |
| 11) Mudalavittalapura | 9.20 | 5.30 | 58 | 71 | 24 | 34 |

### PHYSICAL PROGRESS : LINING




CAD Physical Progress as of 31 Mar. 2018

### PHYSICAL PROGRESS : STRUCTURES




CAD Physical Progress as of 30 September 2018

**Deepak Kumar, SMEC PSC**

# ಯೋಜನೆಯ ಮಾಹಿತಿ ವಿನಿಮಯಕ್ಕೆ ಅಂತರ್ಜಾಲ ತಾಣ




ಏಷ್ಯನ್ ಡೆವಲಪ್‌ಮೆಂಟ್ ಅನುದಾನದೊಂದಿಗೆ ನಡೆಯುತ್ತಿರುವ ಗೊಂದಿ ಆಧುನೀಕರಣ ಯೋಜನೆಯ ಮಾಹಿತಿಯನ್ನು ಅಂತರ್ಜಾಲ ತಾಣದ ಮೂಲಕ ಹಂಚಿಕೊಳ್ಳಲಾಗುತ್ತಿದೆ. ಕರ್ನಾಟಕ ನೀರಾವರಿ ನಿಗಮದ ಜಾಲತಾಣವಿದ್ದು (www.knnlindia.com) ಅದರ ಮೆನು ಬಾರ್‌ನಲ್ಲಿ ಬಾಹ್ಯ ಅನುದಾನಿತ ಯೋಜನೆ ಎಂಬ ವಿಭಾಗದ ಮೇಲೆ ಕ್ಲಿಕ್ ಮಾಡಿದರೆ ಡಿ.ಆರ್.ಐ.ಪಿ. ಮತ್ತು ಕೆ.ಐ.ಎಸ್.ಡಬ್ಲ್ಯು.ಆರ್.ಎಂ.ಐ.ಪಿ. ಎಂಬ ಎರಡು ಕೊಂಡಿಗಳಿವೆ. ಅದರಲ್ಲಿ ಕೆ.ಐ.ಎಸ್.ಡಬ್ಲ್ಯು.ಆರ್.ಎಂ.ಐ.ಪಿ. ಎಂಬುದನ್ನು ಕ್ಲಿಕ್ ಮಾಡಿದರೆ 'ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ' (www.knnlindia.com/kaveri2/adb.html) ಎಂಬ ಜಾಲತಾಣ ಪುಟ ತೆರೆದುಕೊಳ್ಳುತ್ತದೆ.

ಅದರ ಮೆನು ಬಾರ್‌ನಲ್ಲಿ ವಿವಿಧ ವಿಭಾಗಗಳಿದ್ದು ಅದರಲ್ಲಿ ಮುಖ್ಯವಾಗಿ ಯೋಜನಾ ದಾಖಲಾತಿಗಳು, ಸಾಮರ್ಥ್ಯ ಭಿವೃದ್ಧಿ, ಯೋಜನಾ ನಿರ್ವಹಣೆ, ಮೀಡಿಯಾ ಮುಂತಾದ ವಿಭಾಗಗಳಿವೆ. ಯೋಜನೆಗೆ ಸಂಬಂಧಪಟ್ಟ ಕ್ರಿಯಾ ಯೋಜನೆ, ವಿವಿಧ ವರದಿಗಳು, ಛಾಯಾಚಿತ್ರಗಳು, ವೀಡಿಯೋಗಳು, ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಾಮಗ್ರಿಗಳನ್ನು ಕಾಣಬಹುದು.




ಸುಬ್ರಹ್ಮಣ್ಯ ಕೆ.ಎಸ್. ಸ್ಮೆಕ್ ಯೋಜನಾ ಸಹಾಯ ಸಂಸ್ಥೆ

## ಮುಂಬರುವ ಪ್ರಮುಖ ಚಟುವಟಿಕೆಗಳ ಪಕ್ಷಿನೋಟ

- ಮಹಾರಾಷ್ಟ್ರದ ದಿಂಡೋರಿ, ವಾಗದ್, ರಾಳೆಗಾಂವ್ ಸಿದ್ದಿ ಗ್ರಾಮಗಳಿಗೆ ನೀಬಸಸಂ ಪ್ರತಿನಿಧಿಗಳ ಅಧ್ಯಯನ ಪ್ರವಾಸ. ದಿ. 1.10.2018ರಿಂದ 7.10.2018
- ದಿನಾಂಕ 12.10.2018ರಿಂದ 15.10.2018ರವರೆಗೆ ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ವಿವಿಯಲ್ಲಿ ನಡೆಯುವ ಕೃಷಿಮೇಳದಲ್ಲಿ ಯೋಜನೆಯ ಮಳಿಗೆ ಪ್ರದರ್ಶನ.

**ಸಂಪಾದಕೀಯ ಮಂಡಳಿ**

ಶ್ರೀ ಜಿ.ಇ. ಯತೀಶ್ ಚಂದ್ರನ್
ಡಾ. ಶ್ರೀನಿವಾಸ ಮುದ್ರಕರ್ತ
ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

KARNATAKA NEERAVARI NIGAM LTD.
BHADRA CADA
ADB ASIAN DEVELOPMENT BANK
SMEC Member of the Surbana Jurong Group

ಮುಖ್ಯ ಇಂಜಿನಿಯರ್, ಯೋಜನಾ ಅನುಷ್ಠಾನ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ
ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ – 577201

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಮಲವಗೊಪ್ಪ, ಶಿವಮೊಗ್ಗ – 577222

ಸ್ಮೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
ನಂ 28, 1ನೇ ಅಡ್ಡರಸ್ತೆ ಬೀದಿ, ಗಾಂಧಿನಗರ,
ಶಿವಮೊಗ್ಗ–577201